ಶ್ರೀ ಬಿ.ಬಿ. ಚಿಮ್ಮನಕಟ್ಟಿ (ನಗರಾಭಿವೃದ್ಧಿ ಸಚಿವರು): ಮಾನ್ಯ ಅಧ್ಯಕ್ಷರೆ, 2000ದ ಕರ್ನಾಟಕ ಪೌರ ನಿಗಮಗಳ (ಎರಡನೇ ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

ಅಧ್ಯಕ್ಷರು: ಪ್ರಸ್ತಾವ ಏನೆಂದರೆ, "2000ದ ಕರ್ನಾಟಕ ಪೌರ ನಿಗಮಗಳ (ಎರಡನೇ ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು.

(ii) ಕರ್ನಾಟಕ ಮೇಲ್ಪಾಟು ಮಂಡಲಿಗಳ (ತಿದ್ದುಪಡಿ) ವಿಧೇಯಕ, 2001.

ಪರ್ಯಾಲೋಚನಾ ಪ್ರಸ್ತಾವ

+ಶ್ರೀ ಬಿ.ಬಿ. ಚಿಮ್ಮನಕಟ್ಟಿ (ನಗರಾಭಿವೃದ್ಧಿ ಸಚಿವರು): ಮಾನ್ಯ ಅಧ್ಯಕ್ಷರೆ, 2001ರ ಕರ್ನಾಟಕ ಮೇರಾಟ ತೆರಿಗೆ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಪ್ರಸ್ತಾಪವನ್ನು ಮಂಡಿಸಲಾಯಿತು

ಶ್ರೀ ಬಿ.ಬಿ. ಚಿಮ್ಮನಕಟ್ಟಿ: ಮಾನ್ಯ ಅಧ್ಯಕ್ಷರೆ, ನಾವು ಈ ಇಂಪ್ರೂವ್‌ಮೆಂಟ್ ಆಕ್ಟ್‌ಗೆ 37-ಎ ಸೇರ್ಪಡೆ ಮಾಡುವುದಕ್ಕೆ ತಂದಿರತಕ್ಕಂಥಾದ್ದು. ಇದರ ಉದ್ದೇಶ ವಿಶೇಷವಾಗಿ ಬಾಗಲಕೋಟೆ ಪಟ್ಟಣದಲ್ಲಿ ಬಲ್ಕ್ ಅಲಾಟ್‌ಮೆಂಟ್ ಮಾಡುವುದಕ್ಕೆ ಪ್ರಾವಿಜನ್ ಮಾಡಿಕೊಂಡಿದ್ದೇವೆ. 37ರ ಸೆಕ್ಷನ್ ಆಕ್ಟ್ ಒಳಗಡೆ ಇಂಡಿವಿಜುಯಲ್ ಅಲಾಟ್‌ಮೆಂಟ್ ಮಾಡುವುದಕ್ಕೆ ಅವಕಾಶ ಇತ್ತು. ಆದರೆ ಇದು ಸೆಕ್ಷನ್ 37-ಎ ಎಂದು ಮಾರ್ಪಾಟು ಆಗಿರುವುದರಿಂದ ನಾವು ಈ ತಿದ್ದುಪಡಿ ತರುವುದರಿಂದ ಬಲ್ಕ್ ಅಲಾಟ್‌ಮೆಂಟ್ ಮಾಡುವುದಕ್ಕೆ ಸಾಧ್ಯವಾಗಿದೆ. ಈಗ ವಿಶೇಷವಾಗಿ ರಾಜ್ಯ ಸರ್ಕಾರಕ್ಕೆ ಬೇಕಾಗಬಹುದು, ಕೇಂದ್ರ ಸರ್ಕಾರಕ್ಕೆ ಬೇಕಾಗಬಹುದು, ಅದೇ ರೀತಿ ಸೊಸೈಟಿಗಳಿಗೆ ಬೇಕಾಗಬಹುದು ಮತ್ತು ಧಾರ್ಮಿಕ ಶೈಕ್ಷಣಿಕ ಸಂಸ್ಥೆಗಳಿಗೆ ಕೂಡ ಬೇಕಾಗಬಹುದು. ಅದರ ಜೊತೆಗೆ ನಾವು ಸರ್ಕಾರದ ಅನುಮತಿಯೊಂದಿಗೆ ಈ ಮಂಜೂರಾತಿಯನ್ನು ನೀಡಬೇಕು. ಮತ್ತು ಮೇಲಾಗಿ ಈಗ ಬಾಗಲಕೋಟೆ ಪಟ್ಟಣ ಅಭಿವೃದ್ಧಿ ಆಗಬೇಕಾಗಿದೆ. ಈಗ ಬಾಗಲಕೋಟೆ ಒಳಗಡೆ ಸುಮಾರು 4,500 ಎಕರೆ ಜಮೀನನ್ನು ಸ್ವಾಧೀನಪಡಿಸಿಕೊಂಡು ಬಹಳ ವರ್ಷವಾಯಿತು. ಆ 4,500 ಎಕರೆ ಜಮೀನಿನಲ್ಲಿ ರಿಹ್ಯಾಬಿಲಿಟೇಷನ್ ಮಾಡುವುದಕ್ಕೆ ಬಹುತೇಕ 2000 ಎಕರೆ ಸಾಕಾಗಬಹುದು. ಇನ್ನು ಉಳಿದಿರತಕ್ಕಂಥ 2000 ಎಕರೆ ಜಮೀನು ಇಂತಹ ಕೇಸುಗಳಿಗೆ ಉಪಯೋಗ ಮಾಡುವುದಕ್ಕೆ ಸಾಧ್ಯವಾಗಬಹುದು. ಮತ್ತು ಪಟ್ಟಣದ ಅಭಿವೃದ್ಧಿ ದೃಷ್ಟಿಯಿಂದ, ಈಗಾಗಲೇ ಸರ್ಕಾರ ಸುಮಾರು 242 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿ ಆಲ್ಲಿ ರಸ್ತೆಗಳನ್ನು ಮಾಡಿರಬಹುದು, ಪ್ಲಾಟ್‌ಗಳನ್ನು ಮಾಡಿರಬಹುದು ಅನೇಕ ಸವಲತ್ತುಗಳನ್ನು ಕೊಟ್ಟರೂ ಕೂಡ ಇನ್ನೂ ಇನ್ನೂ

ಪಟ್ಟಣದ ಅಭಿವೃದ್ಧಿ ಆಗಬೇಕಾಗಿದೆ. ಆ ಪಟ್ಟಣದ ಅಭಿವೃದ್ಧಿ ತ್ವರಿತಗತಿಯಿಂದ ಆಗಬೇಕು. ಹಾಗೂ ಸಮಪರ್ಕವಾಗಿ ಆಗಬೇಕು ಎನ್ನುವ ದೃಷ್ಟಿಯಿಂದ ವಿಶೇಷವಾಗಿ ಬಾಗಲಕೋಟೆ ಪಟ್ಟಣಕ್ಕೆ ಮಾತ್ರ ಇಂಪ್ರೂವ್‌ಮೆಂಟ್ ಆಕ್ಟ್ ತಿದ್ದುಪಡಿಯನ್ನು ತಂದಿದ್ದೇವೆ. ಇದು ಬಾಗಲಕೋಟೆ ಅಭಿವೃದ್ಧಿಯಾಗಲಿ ಎನ್ನುವ ದೃಷ್ಟಿಯಿಂದ ತಂದಿದ್ದಾಗಿದೆ. ಇದನ್ನು ತಾವು ಒಪ್ಪಿಕೊಳ್ಳಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

+ಶ್ರೀ ಪಿ.ಹೆಚ್. ಪೂಜಾರ್ (ಬಾಗಲಕೋಟೆ): ಮಾನ್ಯ ಅಧ್ಯಕ್ಷರೆ, ಇವತ್ತು ನಗರಾಭಿವೃದ್ಧಿ ಸಚಿವರು ಉಪಬಂಧ ಕಲ್ಪಿಸುವ ದೃಷ್ಟಿಯಿಂದ ಸೆಕ್ಷನ್ 37-ಎ ಪ್ರಕರಣವನ್ನು ಸೇರಿಸುವುದಕ್ಕೆ ಮೇಲ್ಪಾಟಿ ಮಂಡಲಿ ಅಧಿನಿಯಮಕ್ಕೆ ತಿದ್ದುಪಡಿ ಅವಶ್ಯ ಎಂದು ಪರಿಗಣಿಸಿ ತಂದಿದ್ದಾರೆ. ಇದನ್ನು ನಾನು ಸ್ವಾಗತ ಮಾಡುತ್ತಾ, ಬಾಗಲಕೋಟೆ ನಗರ ಸಂಪೂರ್ಣವಾಗಿ ಮುಳುಗಡೆಯಾಗುವಂತಹ ತೀರ್ಮಾನ ಅನೇಕ ವರ್ಷಗಳಿಂದ ಇದ್ದು ಸರ್ಕಾರ ಅನೇಕ ಸಂದರ್ಭದಲ್ಲಿ ತೀರ್ಮಾನ ತೆಗೆದುಕೊಂಡು, ಇವತ್ತು ಅಣೆಕಟ್ಟೆಯಲ್ಲಿ 519.6ಕ್ಕೆ ನೀರು ನಿಲ್ಲಿಸುವ ತೀರ್ಮಾನವನ್ನು ಸರ್ಕಾರ ತೆಗೆದುಕೊಂಡ ಹಿನ್ನೆಲೆಯಲ್ಲಿ ಸುಮಾರು 4000 ಕಟ್ಟಡಗಳು ಮುಳುಗಡೆ ಆಗುತ್ತಿವೆ. ಕಳೆದ ನಾಲ್ಕೈದು ವರ್ಷಗಳಿಂದ ನಾವು ನೋಡುತ್ತಾ ಬಂದಿದ್ದೇವೆ. ಈಗಾಗಲೇ ನಿವೇಶನವನ್ನು ಕೊಟ್ಟಿದ್ದರೂ ಕೂಡ ಪರಿಹಾರ ಧನ ವಿತರಣೆಯಾಗಿದ್ದರೂ ಕೂಡ ಬಾಗಲಕೋಟೆ ಹಳೇ ನಗರದಿಂದ ಸುಮಾರು ಆರು ಕಿಲೋಮೀಟರ್ ದೂರದಲ್ಲಿ ಇರುವಂತಹ ನವನಗರದಲ್ಲಿ ಜನವಸತಿ ದಟ್ಟವಾಗಿ ಬೆಳೆಯುತ್ತಿಲ್ಲ. ಈಗ ಕೊಟ್ಟಂತಹ ಈ ನಾಲ್ಕು ಸಾವಿರ ನಿವೇಶನಗಳಲ್ಲಿ ಸುಮಾರು 20 ರಷ್ಟು ಕೂಡ ಅಲ್ಲಿ ಮನೆಗಳು ನಿರ್ಮಾಣವಾಗಿಲ್ಲ. ಜನ ಅಲ್ಲಿಗೆ ಹೋಗುವುದಕ್ಕೆ ತಯಾರಿಲ್ಲ. ಉದ್ದೇಶ ಇಷ್ಟೆ, ಅಲ್ಲಿ ಜನವಸತಿ ಆದರೆ ವ್ಯಾಪಾರ ಉದ್ಯಮಗಳು ಮುಂಗಟ್ಟುಗಳು ನಿರ್ಮಾಣವಾದರೆ ಜನ ಸಹಜವಾಗಿ ಅಲ್ಲಿಗೆ ಹೋಗುತ್ತಾರೆ. ಈ ದಿಸೆಯಿಂದ ಇಂಡಿವಿಜುಯಲ್ ನಿವೇಶನ ಏನು ಕೊಡುತ್ತಿದ್ದೀರಿ, ಅದನ್ನು ಬಲ್ಕ್ ಅಲಾಟ್‌ಮೆಂಟ್ ಮಾಡಿ ಈ ಗೃಹ ನಿರ್ಮಾಣ ಮಂಡಲಿಗಳಿಗೆ ಕೊಟ್ಟಿದ್ದಾರೆ ಆ ರೀತಿ ಎಲ್ಲರೂ ಒಪ್ಪಿ ಒಂದು ಬಲ್ಕ್ ಆಗಿ ಮನೆಯನ್ನು ಕಟ್ಟಿದರೆ ನಗರದ ವಾತಾವರಣ ಸಹಜವಾಗಿ ಸೃಷ್ಟಿಯಾಗಬಹುದು. ಈ ದಿಶೆಯಲ್ಲಿ ವೈಯಕ್ತಿಕ ನಿವೇಶನ ಕೊಡುವಂಥದ್ದು ಏನಿದೆ ಇದನ್ನು ಬಲ್ಕ್ ಅಲಾಟ್‌ಮೆಂಟ್ ಮಾಡಿ ಗೃಹನಿರ್ಮಾಣ ಮಂಡಳಿಗಳಿಗೆ ಕೊಡುವಂಥದ್ದಕ್ಕೆ ಎಲ್ಲರ ಒಪ್ಪಿಗೆಯನ್ನು ತೆಗೆದುಕೊಂಡು ಅಲ್ಲಿ ಎಲ್ಲರಿಗೆ ಬಲ್ಕ್ ಆಗಿ ಮನೆಗಳನ್ನು ಕೊಟ್ಟು ಅಲ್ಲಿ ನಗರದ ವಾತಾವರಣ ಸಹಜವಾಗಿ ಸೃಷ್ಟಿಯಾಗುವಂಥದ್ದು ಆಗಬೇಕು. ಜನವಸತಿ ದಟ್ಟವಾಗಿ ಬೆಳೆಯುತ್ತಾ ಹೋದಂತೆ ಇನ್ನಿತರರು ಕೂಡ ಅಲ್ಲಿ ನಗರ ಬೆಳವಣಿಗೆಯಾಗುತ್ತಾ ಇದೆ, ಅಲ್ಲಿಗೆ ನಾವು ಹೋಗಬೇಕು, ಅಲ್ಲಿ ನಾವು ವ್ಯಾಪಾರ ಮಾಡಿ ನಮ್ಮ ಉಪಜೀವನ ಮಾಡಲಿಕ್ಕೆ ಅನುಕೂಲವಾಗುತ್ತದೆ ಎನ್ನುವ ವಾತಾವರಣ ನಿರ್ಮಾಣವಾಗಬೇಕು. ಈ ಹಿನ್ನೆಲೆಯಲ್ಲಿ ಗೃಹನಿರ್ಮಾಣ ಮಂಡಳಿಗಳಿಗೆ ಬಲ್ಕ್ ಅಲಾಟ್‌ಮೆಂಟ್ ಮಾಡಿ ಬಾಗಲಕೋಟೆ ನಗರ ಅಭಿವೃದ್ಧಿ ಆಗುವ ದಿಶೆಯಲ್ಲಿ, ನವನಗರ ತೀವ್ರಗತಿಯಲ್ಲಿ ಬೆಳೆಯುವ ದೃಷ್ಟಿಯನ್ನು ಇಟ್ಟುಕೊಂಡು '37 ಎ' ಪ್ರಕರಣವನ್ನು ಸೇರಿಸಲಿಕ್ಕೆ ಮಾನ್ಯ ಸಚಿವರು ಏನು ತೀರ್ಮಾನ ಮಾಡಿದ್ದಾರೆ ಇದನ್ನು ನಾನು ಸ್ವಾಗತ ಮಾಡುತ್ತಾ, ಇದಕ್ಕೆ ಸದನ ತನ್ನ ಒಪ್ಪಿಗೆಯನ್ನು ಕೊಡಬೇಕೆನ್ನುವ ವಿನಂತಿಯನ್ನು ತಮ್ಮ ಮೂಲಕ ಮಾಡುತ್ತಿದ್ದೇನೆ.

+ ಶ್ರೀ ಬಿ.ಎನ್. ಬಚ್ಚೇಗೌಡ (ಹೊಸಕೋಟೆ): ಮಾನ್ಯ ಅಧ್ಯಕ್ಷರೆ, ಸಗಟು ಹಂಚಿಕೆ ಮಾಡಲು ಮಾನ್ಯ ಸಚಿವರು ತಂದಿರತಕ್ಕಂಥ ತಿದ್ದುಪಡಿ ಇದು ಕೇವಲ ಬಾಗಲಕೋಟೆಗ ಸೀಮಿತವಾಗಿರತಕ್ಕಂಥದ್ದಲ್ಲ. ಹೊಸ ಪ್ರಕರಣ 37-ಎ ಇದರಲ್ಲಿ ಏನು ಹೇಳುತ್ತಾರೆಂದರೆ -

> "ಸಗಟು ಹಂಚಿಕೆ ಮಾಡಲು ಮಂಡಳಿಯ ಅಧಿಕಾರ, ಈ ಅಧಿನಿಯಮದಲ್ಲಿ ಅಥವಾ ಈ ಅಧಿನಿಯಮದ ಅಡಿಯಲ್ಲಿ ಮಂಜೂರಾದ ಅಭಿವೃದ್ಧಿ ಯೋಜನೆಗಳಲ್ಲಿ ಏನೇ ಒಳಗೊಂಡಿದ್ದರೂ ಯಾವುದೇ ಅಭಿವೃದ್ಧಿ ಯೋಜನೆಯ ಉದ್ದೇಶಕ್ಕಾಗಿ ಮಂಡಲಿಯು ನಿಯಮಿಸಬಹುದಾದ ಅಂಥ ಯಾವುದೇ ನಿರ್ಬಂಧ, ಷರತ್ತು ಮತ್ತು ಪರಿಮಿತಿಗೆ ಒಳಪಟ್ಟು ತನಗೆ ಸೇರಿದ ಅಥವಾ ತನ್ನಲ್ಲಿ ನಿಹಿತವಾದ" ಎಂದು ಹೇಳಿ.

ಮೂಲಭೂತವಾಗಿ ಎಲ್ಲಾ ಪ್ರಾಧಿಕಾರಗಳಿಗೆ ತಿದ್ದುಪಡಿ ತಂದಿರತಕ್ಕಂಥಾದ್ದಾಗಿದೆ. ಅಂದರೆ 27 ಜಿಲ್ಲಾ ಅಥವಾ ತಾಲ್ಲೂಕು ಮಟ್ಟದಲ್ಲಿ ಇರತಕ್ಕಂಥ ಪ್ರಾಧಿಕಾರಗಳಿಗೆ ಇಲ್ಲಿ ತಿದ್ದುಪಡಿ ತಂದಿರುವಂಥದ್ದು. ನಿವೇಶನಗಳನ್ನು ಕೊಡುವಂಥದ್ದು, ಸಗಟು ಹಂಚಿಕೆ ಮಾಡುವಂಥ ವಿಷಯದಲ್ಲಿ ಮೊದಲು ಆ ಅಧಿಕಾರ ಬಿ.ಡಿ.ಎ. ನಲ್ಲಿತ್ತು. BDA was a City Improvement Trust Board earlier, later on it became BDA. ಕಾಲಕ್ರಮೇಣ ಇದು ಬೆಂಗಳೂರು ಡೆವಲಪ್‌ಮೆಂಟ್ ಅಥಾರಿಟಿ ಎಂದು ಆಗಿರುವಂಥದ್ದು. ಆ ಸಿಟಿ ಇಂಪ್ರೂವ್‌ಮೆಂಟ್ ಟ್ರಸ್ಟ್ ಬೋರ್ಡ್‌ನ ನಿಯಮ ಏನಿತ್ತು ಅದೇ ನಿಯಮವನ್ನು ಇವತ್ತು ತೆಗೆದುಕೊಂಡು ಜಿಲ್ಲಾ ಮಟ್ಟದಲ್ಲಿರತಕ್ಕಂಥ ಬೇರೆ ಅಭಿವೃದ್ಧಿ ಪ್ರಾಧಿಕಾರಗಳಲ್ಲಿ ಈ ಸೈಟ್ಸ್ ಅಂಡ್ ಸರ್ವೀಸಸ್‌ನ್ನು ಕೊಡುವಂಥ ವ್ಯವಸ್ಥೆಯನ್ನು ಮಾಡಿಕೊಂಡಿರುವಂಥದ್ದು ಆಗಿದೆ. ಒಂದೇ ಹಂತದಲ್ಲಿ ಈ ಸಗಟು ಹಂಚಿಕೆ ಮಾಡಲು ಅವಕಾಶ ಕೊಡಬಾರದೆಂದು ಈ ನಿಯಮವನ್ನು ತೆಗೆದುಹಾಕಿದ್ದರು. ಇಷ್ಟಾಗಿದ್ದರೂ ಸಹ ಪುನಃ ಸರ್ಕಾರ ಇದನ್ನು ರೀ-ಇಂಟ್ರಡ್ಯೂಸಿಂಗ್ ಮಾಡುತ್ತಿದೆ. ಇದರಿಂದ ಸಗಟು ಹಂಚಿಕೆಯಲ್ಲಿ ದುರುಪಯೋಗಗಳು ಹೆಚ್ಚಾಗುತ್ತವೆ. ಹೇಗೆಂದರೆ ಆ ಪ್ರಾಧಿಕಾರಗಳು ಭೂಸ್ವಾಧೀನ ಮಾಡಿ ತನ್ನ ಸ್ವಾಧೀನಕ್ಕೆ ಒಳಪಡಿಸಿಕೊಂಡಿರುತ್ತವೆ. ನಂತರ ಆ ಪ್ರಾಧಿಕಾರಕ್ಕೆ ಅರ್ಜಿ ಹಾಕಿರತಕ್ಕಂಥ ಜನರಿಗೆ ನಿವೇಶನ ಕೊಡುವಂಥ, ಅವರ ಸರ್ವೀಸ್ ಮಾಡುವಂಥ ಕೆಲಸ ಮಾಡುತ್ತದೆ. ಆದರೆ ಈ ಸೆಕ್ಷನ್ 37-ಎ ಗೆ ತಿದ್ದುಪಡಿಯಿಂದ ಬೇರೆ ಬೇರೆ ಹೌಸಿಂಗ್ ಸೊಸೈಟಿಗಳು, ಅಥವಾ ಗ್ರೂಪ್ ಹೌಸಿಂಗ್ ಮಾಡತಕ್ಕಂಥ ಖಾಸಗಿಯವರು, ಸಹಕಾರಿ ಸಂಘಗಳು ತಮ್ಮದೇ ಆದ ಗೃಹ ನಿರ್ಮಾಣ ಸಂಘಗಳನ್ನು ಮಾಡಿಕೊಂಡು ಹೋಗುವುದಕ್ಕೆ ಅವಕಾಶವಿರುವುದರಿಂದ ಇದರ ದುರುಪಯೋಗವನ್ನು ಮಾಡುವವರ ಸಂಖ್ಯೆಯೇ ಜಾಸ್ತಿ ಇರುತ್ತದೆ. ಮತ್ತು ಪ್ರಾಧಿಕಾರಗಳಿಗೆ ನಿವೇಶನಗಳನ್ನು ಹಂಚುವಂಥ ಕೆಲಸ ಸಂಪೂರ್ಣ ಇಲ್ಲವಾಗುತ್ತದೆ. ಆಲಮಟ್ಟಿ ಡ್ಯಾಮ್‌ನ್ನು ಎತ್ತರ ಮಾಡುವುದರಿಂದ ಬಾಗಲಕೋಟೆಯಲ್ಲಿ ಮುಳುಗಡೆಯಾಗುವ ಪ್ರದೇಶದ ಜನರಿಗೆ ಪುನರ್‌ವಸತಿ ಕಲ್ಪಿಸಬೇಕೆಂದು ಶ್ರೀ ಪಿ.ಹೆಚ್. ಪೂಜಾರ್‌ರವರು ಕೇಳಿಕೊಂಡಿದ್ದಾರೆ ಮತ್ತು ಅದನ್ನು ಮಾಡಬೇಕಾಗುತ್ತದೆ. ಆದ್ದರಿಂದ ಈ ತಿದ್ದುಪಡಿ ಬಾಗಲಕೋಟೆಗೆ ಮಾತ್ರ ಸೀಮಿತವಾದರೆ ನಮ್ಮದೇನೂ ಅಭ್ಯಂತರವಿಲ್ಲ. ಆದರೆ ಇದನ್ನು ಬೇರೆ ಕಡೆಗೂ ವಿಸ್ತರಣೆ ಮಾಡುವುದಾದರೆ, ನಾನು ಹಿಂದೆ ಸಚಿವನಾಗಿ ನೋಡಿದ್ದೇನೆ, ಅದರಿಂದ ಉಪಯೋಗ ಆಗುವುದಕ್ಕಿಂತ

ದುರುಪಯೋಗ ಆಗುವ ಸಂಭವವೇ ಜಾಸ್ತಿ ಇದೆ. ಬಾಗಲಕೋಟೆಗೆ ಸೀಮಿತವಾಗಿ ತಿದ್ದುಪಡಿ ತಂದರೆ ನಮ್ಮ ವಿರೋಧ ಇಲ್ಲ. ಇದಕ್ಕೆ ಸೀಮಿತವಾಗಿ ಮಾಡುವುದಕ್ಕೆ ಮಾನ್ಯ ಸಚಿವರು ಯೋಚನೆ ಮಾಡಬೇಕು. ಎಲ್ಲಾ ಪ್ರಾಧಿಕಾರಗಳಿಗೂ ಅವಕಾಶ ಮಾಡಿಕೊಡುತ್ತೀರೆಂದರೆ ಪುನಃ ಅಲ್ಲಿ ಎಲ್ಲಾ ಕಡೆ ವಂಚನೆ, ಭ್ರಷ್ಟಾಚಾರಕ್ಕೆ ಎಡೆ ಮಾಡಿಕೊಟ್ಟಂತಾಗುತ್ತದೆ. ಸಗಟು ಹಂಚಿಕೆಯನ್ನು ಬಿ.ಡಿ.ಎ ನಲ್ಲಿ ಏನು ರದ್ದುಪಡಿಸಿದ್ದಾರೆ, ಅದನ್ನು ಪುನಃ ಬೇರೆ ಕಡೆಯಿಂದ ತರುವಂಥ ಪ್ರಯತ್ನ ತಮ್ಮಿಂದ ಆಗಬಾರದೆಂದು ಹೇಳಿ ಈ ತಿದ್ದುಪಡಿಯನ್ನು ವಿರೋಧಿಸುತ್ತೇನೆ.

+ಶ್ರೀ ಎಸ್. ಸುರೇಶ್‌ಕುಮಾರ್ (ರಾಜಾಜಿನಗರ): ಮಾನ್ಯ ಅಧ್ಯಕ್ಷರೆ, ಈ ವಿಧೇಯಕದ 'ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆಗೂ' ಮತ್ತು ಸರ್ಕಾರ ತರುತ್ತಿರುವ ತಿದ್ದುಪಡಿಗೂ ಎಲ್ಲೋ ಸ್ವಲ್ಪ ವ್ಯತ್ಯಾಸ ಕಾಣುತ್ತಿದೆ. 'ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ' ಎಂಬ ತಲೆಬರಹದಡಿಯಲ್ಲಿ ಏನು ಹೇಳಿದ್ದಾರೆಂದರೆ -

> "ಅಲಮಟ್ಟಿ ಅಣೆಕಟ್ಟಿನ ಎತ್ತರವನ್ನು ಹೆಚ್ಚಿಸುವುದರಿಂದಾಗಿ ಮುಳುಗಡೆಯಾಗಲಿರುವ ಬಾಗಲಕೋಟೆ ಪಟ್ಟಣದಲ್ಲಿರುವ ಗ್ರೂಫ್ ಹೌಸಿಂಗ್ ಸೊಸೈಟಿಗಳಿಗೆ ಜಮೀನಿನ ಸಗಟು ಹಂಚಿಕೆ ಮಾಡುವುದಕ್ಕಾಗಿ ಉಪಬಂಧ ಕಲ್ಪಿಸಲು 37ಎ ಪ್ರಕರಣವನ್ನು ಸೇರಿಸಲು ಕರ್ನಾಟಕ ಮೇಲ್ಪಾಟು ಮಂಡಲಿಗಳ ಅಧಿನಿಯಮ, 1976ನ್ನು (1976ರ ಕರ್ನಾಟಕ ಅಧಿನಿಯಮ 11) ತಿದ್ದುಪಡಿ ಮಾಡುವುದು ಅವಶ್ಯಕವೆಂದು ಪರಿಗಣಿಸಲಾಗಿದೆ".

ಈ ಉದ್ದೇಶದಿಂದ ತಿದ್ದುಪಡಿ ತರಲಾಗಿದೆ ಎಂದು ಹೇಳಿದ್ದೀರಿ. ಆದರೆ ಈ ಸೆಕ್ಷನ್ 37ಎ ಹೊಸ ಪ್ರಕರಣವನ್ನು ನೋಡಿದಾಗ it is an omnibus amendment. ಸರ್ಕಾರ ತರುತ್ತಿರುವುದು 'ಕರ್ನಾಟಕ ಮೇಲ್ಪಾಟು ಮಂಡಲಿಗಳ ವಿಧೇಯಕ' ಅಂದರೆ Improvement Board, which are in existence all over the State, ಆ ಒಂದು ಆಕ್ಟ್‌ಗೆ ಇಂಪ್ರೂವ್‌ಮೆಂಟ್ ಬೋರ್ಡ್ಸ್ ಸಲುವಾಗಿ ಸರ್ಕಾರ ಒಂದು ತಿದ್ದುಪಡಿ ತರುತ್ತಿದೆ. ಈ '37ಎ' ಅಡಿಯಲ್ಲಿ ಏನು ಹೇಳಿದ್ದಾರೆಂದರೆ-

> "ಈ ಅಧಿನಿಯಮದಲ್ಲಿ ಅಥವಾ ಈ ಅಧಿನಿಯಮದ ಅಡಿಯಲ್ಲಿ ಮಂಜೂರಾದ ಅಭಿವೃದ್ಧಿ ಯೋಜನೆಗಳಲ್ಲಿ ಏನೇ ಒಳಗೊಂಡಿದ್ದರೂ ಯಾವುದೇ ಅಭಿವೃದ್ಧಿ ಯೋಜನೆಯ ಉದ್ದೇಶಕ್ಕಾಗಿ ಮಂಡಲಿಯೂ ನಿಯಮಿಸಬಹುದಾದ ಅಂಥ ಯಾವುದೇ ನಿರ್ಬಂಧ, ಷರತ್ತು ಮತ್ತು ಪರಿಮಿತಿಗೆ ಒಳಪಟ್ಟು ತನಗೆ ಸೇರಿದ".

ಅಂದರೆ ಯಾವುದು ಮೇಲ್ಪಾಟು ಮಂಡಳಿ ಇದೆಯೋ ಅದಕ್ಕೆ ಸೇರಿದ

> "ತನ್ನಲ್ಲಿ ನಿಹಿತವಾದ ಅಥವಾ ತಾನು ಸ್ವಾಧೀನಪಡಿಸಿಕೊಂಡ ಯಾವುದೇ ಭೂಮಿಯನ್ನು ಮಾರಾಟದ ಮೂಲಕ, ಗುತ್ತಿಗೆಯ ಮೂಲಕ ಅಥವಾ ಅನ್ಯಥಾ

(1) ರಾಜ್ಯ ಸರ್ಕಾರಕ್ಕೆ; ಅಥವಾ

(2) ಕೇಂದ್ರ ಸರ್ಕಾರಕ್ಕೆ; ಅಥವಾ

(3) ಕೇಂದ್ರ ಸರ್ಕಾರ ಅಥವಾ ರಾಜ್ಯ ಸರ್ಕಾರದ ಒಡೆತನದಲ್ಲಿರುವ ಅಥವಾ ನಿಯಂತ್ರಣದಲ್ಲಿರುವ ಯಾವುದೇ ನಿಗಮ, ನಿಕಾಯ ಅಥವಾ ಸಂಸ್ಥೆಗೆ ಅಥವಾ

(4) ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ, 1959ರ ಅಡಿಯಲ್ಲಿ ನೋಂದಣಿಯಾದ ಯಾವುದೇ ಗೃಹನಿರ್ಮಾಣ ಸಹಕಾರ ಸಂಘಕ್ಕೆ; ಅಥವಾ

ಈ 4ನೇ ಅಂಶದಲ್ಲಿ ಬರುವಂಥದ್ದೇ ಬಹಳ ದೊಡ್ಡ ತೊಂದರೆಯಾಗಿದೆ. ಹೌಸಿಂಗ್ ಸೊಸೈಟಿಗಳಲ್ಲಿ ಯಾವ ವ್ಯವಸ್ಥೆ ಇದೆ, ಏನು ನಡೆಯುತ್ತಿದೆ ಎನ್ನುವುದು ನಮಗೂ ಕೂಡ ಗೊತ್ತಿದೆ. ಇಂಥ ಯಾವುದೇ ಸಹಕಾರ ಸಂಘಕ್ಕೆ ಸರ್ಕಾರ ಓಪನ್, ಬ್ಲಾಂಕ್ ಚೆಕ್ ಕೊಡುತ್ತಿದೆ.

(5) ಕರ್ನಾಟಕ ಸಂಘಗಳ ನೋಂದಣಿ ಅಧಿನಿಯಮ, 1960 (1960ರ ಕರ್ನಾಟಕ ಅಧಿನಿಯಮ 7) ಅಡಿಯಲ್ಲಿ ನೋಂದಣಿಯಾದ ಯಾವುದೇ ಸಂಘಕ್ಕೆ ಅಥವಾ

(6) ಪೂರ್ಣವಾಗಿ ಧರ್ಮಾದಾಯ, ಶೈಕ್ಷಣಿಕ ಅಥವಾ ಧಾರ್ಮಿಕ ಉದ್ದೇಶಗಳಿಗಾಗಿ ರಚಿಸಲಾದ ಒಂದು ನ್ಯಾಸಕ್ಕೆ."

ಯಾವುದೋ ಒಂದು ಸ್ಕೂಲ್ ಹೆಸರಿನಲ್ಲಿ ಬರುತ್ತಾರೆ. ಶೈಕ್ಷಣಿಕ ಎಂದರೆ ಒಂದು ಬೋರ್ಡ್ ಇದ್ದರೆ ಆಯಿತು. ಆ ಒಂದು ಪರಿಸ್ಥಿತಿಗೆ ಬಂದುಬಿಟ್ಟಿದ್ದೇವೆ. ಇವರಿಗೆ ಸಗಟು ಹಂಚಿಕೆ ಮಾಡಬಹುದೆಂದು ಸರ್ಕಾರ ಅಮೆಂಡ್‌ಮೆಂಟ್ ತಂದಿರುವಂಥದ್ದು. ಆದರೆ ಇಲ್ಲಿ ಬಾಗಲಕೋಟೆಗೋಸ್ಕರ ತಿದ್ದುಪಡಿ ಎಂದು ಹೇಳಿರುವುದು. ಆದರೆ ಇದು ರಾಜ್ಯದ ಯಾವುದೇ ಭಾಗದಲ್ಲಿರುವ ಸೊಸೈಟಿಗಳು ಇರಬಹುದು, ಹೌಸಿಂಗ್ ಸೊಸೈಟಿಗಳಿರಬಹುದು ಅಥವಾ ಇನ್ನಿತರ ಸಂಸ್ಥೆಗಳಿರಬಹುದು, ಇವುಗಳಿಗೆ ಇದು ಅಪ್ಲೈ ಆಗುತ್ತದೆ, ಆಗಬಹುದು. ಆದ್ದರಿಂದ ಈ ತಿದ್ದುಪಡಿ ಬಾಗಲಕೋಟೆ ನಗರಕ್ಕೆ ಬಿಟ್ಟು ರಾಜ್ಯದ ಬೇರೆ ಯಾವುದೇ ನಗರಕ್ಕೆ ಇದು ಅನ್ವಯವಾಗುವುದಿಲ್ಲವೆಂದು ಒಂದು ತಿದ್ದುಪಡಿ ತಂದರೆ ನಾವು ಪ್ರಾಯಶಃ ಅದಕ್ಕೆ ಒಪ್ಪಿಕೊಳ್ಳುತ್ತೇವೆ.

+ ಶ್ರೀ ಎ. ರಾಮದಾಸ್ (ಕೃಷ್ಣರಾಜ): ಮಾನ್ಯ ಅಧ್ಯಕ್ಷರೆ, ಈ ವಿಧೇಯಕದಲ್ಲಿ ಬಾಗಲಕೋಟೆ ವಿಚಾರವನ್ನು ಇಟ್ಟುಕೊಂಡು ಅದನ್ನು ಇಡೀ ರಾಜ್ಯಕ್ಕೆ ಅನ್ವಯ ಮಾಡುವಂಥ ವ್ಯವಸ್ಥೆಯನ್ನು ಇಟ್ಟುಕೊಂಡು ಹೊರಟಿರುವುದು ಬಹಳ ದುಃಖದ ಸಂಗತಿಯಾಗಿದೆ. ಸರ್ಕಾರ ನೇರವಾಗಿ ಇದಕ್ಕೆ ಅಮೆಂಡ್‌ಮೆಂಟ್ ತಂದು ಕೇವಲ ಬಾಗಲಕೋಟೆಗೆ ಮಾತ್ರ ಅನ್ವಯವಾಗುತ್ತದೆಂದು ಹೇಳಿದರೆ ನಮ್ಮದೇನೂ ಅಭ್ಯಂತರವಿಲ್ಲ. ಮತ್ತು ಇದರ ಬಗ್ಗೆ ನಾವು ಹೆಚ್ಚಿಗೇನೂ ಮಾತನಾಡಬೇಕಾದಂಥ ಅವಶ್ಯಕತೆಯಿಲ್ಲ. ಆದರೆ ಇಲ್ಲಿ ಕೇವಲ ಬಾಗಲಕೋಟೆಗೆ ಮಾತ್ರ ಎಂದು ಹೇಳದೆಯೇ ಬಾಗಲಕೋಟೆಯ ಕಾರಣವನ್ನು ಕೊಟ್ಟುಕೊಂಡು ಸರ್ಕಾರ ಈ ವಿಧೇಯಕವನ್ನು ತರುತ್ತಿದೆ. "ಕರ್ನಾಟಕ ಇಂಪ್ರೂವ್‌ಮೆಂಟ್ ಟ್ರಸ್ಟ್ ಬೋರ್ಡ್ ಆಕ್ಟ್ 1976" ಪ್ರಕಾರದಲ್ಲಿ ಆ ಸೆಕ್ಷನ್ 37 ಅನ್ನು ಹಿಂದೆ ನಡೆದಂಥ ಕೆಟ್ಟ ಅನುಭವಗಳ ಆಧಾರದ ಮೇಲೆಯೇ

ಇನ್‌ಕಾರ್ಪೊರೇಟ್ ಮಾಡಿರುವಂಥದ್ದು. ಆ ಬೋರ್ಡ್‌ನಲ್ಲಿರುವಂಥದ್ದು ಏನೆಂದರೆ- "Power of Board to lease, sell or transfer property. ಇದು ಆಗಬಾರದು. ಒಂದು ಸಲ ಯಾವ ಕಾರಣಕ್ಕೋಸ್ಕರ ಲ್ಯಾಂಡ್ ಅಕ್ವಿಜಿಷನ್ ಆಕ್ಟ್ ಅಡಿಯಲ್ಲಿ ನಾವು ಬಳಸಿಕೊಂಡಿರುತ್ತೇವೆಯೋ, ಸ್ವಾಧೀನವನ್ನು ಪಡೆದುಕೊಂಡಿರುತ್ತೇವೆಯೋ ಅದಕ್ಕೆ ಮಾತ್ರ ಉಪಯೋಗ ಮಾಡಬೇಕೆನ್ನುವಂಥ ವಿಚಾರ ಇದೆ. ಆ ಉದ್ದೇಶಕ್ಕೋಸ್ಕರವಾಗಿ ಭೂಮಿಯನ್ನು ತೆಗೆದುಕೊಳ್ಳಲಿಕ್ಕೆ ಪ್ರಾವಿಜನ್ ಇದೆ. ಆದರೆ ಭೂಮಿಯನ್ನು ತೆಗೆದುಕೊಂಡ ನಂತರದಲ್ಲಿ ಈ ಭೂಮಿಯನ್ನು ಸರ್ಕಾರಕ್ಕೋ ಅಥವಾ ಸರ್ಕಾರಿ ಸ್ವಾಮ್ಯದ ಒಂದು ಸಂಸ್ಥೆಗೋ ಕೊಡುವಂಥ ವಿಚಾರದಲ್ಲಿ ನಮ್ಮಲ್ಲಿ ಯಾವುದೇ ಚಿಭ್ಯಂತರವಿಲ್ಲ. ಆದರೆ, ನೀವು 4ನೇ ಅಂಶದಲ್ಲಿ, ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ, 1959ರ ಅಡಿಯಲ್ಲಿ ನೋಂದಣಿಯಾದ ಯಾವುದೇ ಗೃಹ ನಿರ್ಮಾಣ ಸಹಕಾರ ಸಂಘಕ್ಕೆ ಎಂದು ಹೇಳಿದ್ದೀರಿ. ಹಿಂದೆ ನಮ್ಮಲ್ಲಿ ಬಲ್ಕ್ ಅಲಾಟ್‌ಮೆಂಟ್ ಸ್ಕೀಂ ಇತ್ತು. 1985-86ನೇ ಇಸವಿಯಲ್ಲಿ ಜನತಾದಳ ಸರ್ಕಾರವಿದ್ದಾಗ, ಕಾಂಗ್ರೆಸ್ಸಿನ ಕಾಗೋಡು ತಿಮ್ಮಪ್ಪನವರು ಇದ್ದಿದ್ದರು, ಅವರು ಗಲಾಟೆ ಮಾಡಿದ್ದನ್ನು ನಾನು ಓದುತ್ತಿದ್ದೆ. ಹಿಂದೆ ಶ್ರೀ ರಾಮಕೃಷ್ಣ ಹೆಗಡೆಯವರು ಮುಖ್ಯಮಂತ್ರಿಗಳಾಗಿದ್ದ ಸಂದರ್ಭದಲ್ಲಿ ಬಲ್ಕ್ ಅಲಾಟ್‌ಮೆಂಟ್ ಸ್ಕೀಂನಿಂದ ಬೇರೆ ಬೇರೆ ಹೌಸಿಂಗ್ ಸೊಸೈಟಿಗಳಿಗೆ ಅಲ್ಲಿರುವ ಭೂಮಿಯನ್ನು ಕೊಟ್ಟರು. ಅದರ ಬಗ್ಗೆ ದೊಡ್ಡ ಗಲಾಟೆಯಾಗಿ, ಗೋಲ್‌ಮಾಲ್ ಆಗಿದೆ ಎಂಬ ವಿಚಾರ ಇಟ್ಟುಕೊಂಡು, ಇದಾಗಬಾರದೆಂದು ನಿಲ್ಲಿಸಲಾಗಿತ್ತು. ಅದರ ಯಶಸ್ಸು ನಿಮಗೇ ಸೇರಬೇಕು. ಈಗೇನು ಅಮೆಂಡ್‌ಮೆಂಟ್ ತಂದಿದ್ದೀರಿ, ಆ ಬಲ್ಕ್ ಅಲಾಟ್‌ಮೆಂಟ್ ತಪ್ಪಿಸಿದ್ದು ನೀವೇ.

ಶ್ರೀ ಕಾಗೋಡು ತಿಮ್ಮಪ್ಪ (ಪಡುಬಿದ್ರಿ ಕಲ್ಯಾಣ ಸಚಿವರು): ಬಲ್ಕ್ ಅಲಾಟ್‌ಮೆಂಟ್ ಪ್ರಶ್ನೆ ಬಂದಾಗ, ಶಾಸಕರ ಹೌಸಿಂಗ್ ಕೋ-ಆಪರೇಟೀವ್ ಸೊಸೈಟಿಗಳಿಲ್ಲವೆ? ಆ ಸೊಸೈಟಿಗಳಿಗೆ ಸೈಟ್ ಕೊಡುವಾಗ ಈ ಪ್ರಶ್ನೆ ಬಂದು, ಬಿಡಿಎ ಆಕ್ಟ್‌ಗೆ ಅಮೆಂಡ್‌ಮೆಂಟ್ ತಂದು, ಶಾಸಕರ ಹೌಸಿಂಗ್ ಕೋ-ಆಪರೇಟೀವ್ ಸೊಸೈಟಿಗಳಿಗೆ ಬಲ್ಕ್ ಅಲಾಟ್‌ಮೆಂಟ್ ಮಾಡುವುದಕ್ಕೆ ಅನುಕೂಲ ಮಾಡುವ ದೃಷ್ಟಿಯಿಂದ ಈ ಅಮೆಂಡ್‌ಮೆಂಟ್ ತಂದಿದೆ. ಆ ಪ್ರಿನ್ಸಿಪಲ್ ಬೇಸಿಸ್ ಮೇಲೆ ಇದನ್ನು ಮಾಡುತ್ತಿರುವುದು.

Sri B.N. Bachegowda: Bulk allotment scheme is not in force in B.D.A.

ಶ್ರೀ ಕಾಗೋಡು ತಿಮ್ಮಪ್ಪ: ಇಲ್ಲದಿದ್ದರೆ, ಶಾಸಕರ ಹೌಸಿಂಗ್ ಸೊಸೈಟಿಗೆ ಕೊಡಲು ಬರುವುದಿಲ್ಲ. ಇದು ವಿಷಯ ಕೋರ್ಟಿಗೆ ಹೋಗಿ, ಕೋರ್ಟ್ ಡೈರೆಕ್ಷನ್ ಮೇಲೆ ತಿದ್ದುಪಡಿ ಮಾಡಿ, ರ್ಯಾಟಿಫೈ ಮಾಡಲಾಯಿತು.

ಶ್ರೀ ಎ. ರಾಮದಾಸ್: ತಮ್ಮ ಆಕ್ಟ್‌ನ ಸೆಕ್ಷನ್ 37ರ ಪ್ರಕಾರ, ಯಾವುದೇ ಬಲ್ಕ್ ಅಲಾಟ್‌ಮೆಂಟ್ ಕೊಡುವ ಹಾಗಿಲ್ಲ. ಅದರ ಜೊತೆಯಲ್ಲಿ ಕೇವಲ ಹೌಸಿಂಗ್ ಸೊಸೈಟಿಯಲ್ಲ, ಕರ್ನಾಟಕ ಸಹಕಾರ ಸಂಘಗಳ ನೋಂದಾವಣೆಯ ಅಧಿನಿಯಮದಡಿಯಲ್ಲಿ ಅಸೋಷಿಯೇಷನ್ ನವರು ಲೇ-ಔಟ್ ಫಾರ್‌ಮೇಷನ್ ಮಾಡಲು ಪ್ರಾವಿಜನ್ ಮಾಡಿದ್ದೀರಿ. ಅವರೇನಾದರೂ

ಭೂಮಿ ಬೇಕೆಂದರೆ, ಈಗಾಗಲೇ ಹತ್ತಾರು ವರ್ಷಗಳ ಕಾಲದಲ್ಲಿ ಅಕ್ವೈರ್ ಮಾಡಿ ಇಟ್ಟಿರುವ ಭೂಮಿಯೇನಿದೆ, ಅದನ್ನು ಬಲ್ಕ್ ಅಲಾಟ್‌ಮೆಂಟ್ ಕೊಡುವುದಕ್ಕೆ ಇದರಲ್ಲಿ ಪ್ರಾವಿಜನ್ ಮಾಡಲಾಗಿದೆ. ಹಿಂದಿನ ಸರ್ಕಾರವಿದ್ದಾಗ, ಆ ಪ್ರಪೋಸಲ್ ಬಂದಿದ್ದು, ಈ ಲ್ಯಾಂಡ್ ಅಕ್ವಿಜಿಷನ್ ಆಕ್ಟ್ ಸೆಕ್ಷನ್ 109 ರಡಿಯಲ್ಲಿ, ನೀವು ಯಾವುದೇ ಹೌಸಿಂಗ್ ಸೊಸೈಟಿ ಅಥವಾ ಅಸೋಷಿಯೇಷನ್‌ರವರು ಭೂಮಿಯನ್ನು ಪರ್ಚೇಸ್ ಮಾಡಬೇಕಾದರೆ ಸಿಂಗಲ್ ವಿಂಡೋ ಏಜೆನ್ಸಿಯಲ್ಲಿ ಸೆಕ್ಷನ್ 109 ರಡಿಯಲ್ಲಿ ಪ್ರಾವಿಜನ್ ಕೊಡುತ್ತಿದ್ದೀರಿ. ಆ ಭೂಮಿ ನೋಟಿಫಿಕೇಷನ್ ಆಗಿದ್ದರೂ ಕೂಡ, ಅದನ್ನು ಡೀ-ನೋಟಿಫೈ ಮಾಡಿಕೊಡುವ ಪ್ರಾವಿಜನ್ ಮಾಡಿಕೊಂಡಿದ್ದೀರಿ. ಆ ಒಂದು ಅಧಿಕಾರವನ್ನು ತಾವೇ ಇಟ್ಟುಕೊಂಡಿದ್ದೀರಿ. ಸೆಕ್ಷನ್ 109 ರಡಿಯಲ್ಲಿ ತಾವು ಯಾವುದೇ ಭೂಮಿಯನ್ನು ಈ ರೀತಿಯ ಪರ್ಮಿಷನ್ ಕೊಟ್ಟು, ಯಾವುದೇ ಹೌಸಿಂಗ್ ಸೊಸೈಟಿ ಅಥವಾ ಅಸೋಷಿಯೇಷನ್ ತೆಗೆದುಕೊಳ್ಳಲು ಅವಕಾಶವಿರುವಾಗ, ಇಡೀ ರಾಜ್ಯಕ್ಕೆ ಅನ್ವಯವಾಗುವ ರೀತಿಯಲ್ಲಿ ಮಾಡದೆ, ಬಾಗಲಕೋಟೆಗೆ ತಾವೇ ಸೆಕ್ಷನ್ 109 ರಡಿಯಲ್ಲಿ ಈಗೇನು ಭೂಮಿಯಿದೆ, ಅದನ್ನು ಹೌಸಿಂಗ್ ಸೊಸೈಟಿಗೆ ಕೊಡಲು ಸ್ಪೆಷಲ್ ಪರ್ಮಿಷನ್ ಕೊಡುವ ಪ್ರಾವಿಜನ್ ಇತ್ತು. ಇದಲ್ಲದೆ, ನೋಟಿಫೈಡ್ ಭೂಮಿಯಾಗಿದ್ದರೂ, ಕ್ಯಾಬಿನೆಟ್ ಸಬ್‌ಕಮಿಟಿಯಲ್ಲಿ ಸರ್ಕಾರ ಸದುದ್ದೇಶಕ್ಕಾಗಿ ಡಿ-ನೋಟಿಫೈ ಮಾಡಿ, ಯಾವುದೇ ಹೌಸಿಂಗ್ ಸೊಸೈಟಿಗೆ ಅದನ್ನು ಟ್ರಾನ್ಸ್‌ಫರ್ ಮಾಡಲು ಪ್ರಾವಿಜನ್ ಮಾಡಿಕೊಂಡಿದ್ದೀರಿ. ಆ ಪ್ರಕರಣಗಳಿವೆ. ಅದನ್ನು ಈಗಾಗಲೇ ಮಾಡಿ, ಸಿಟಿ ಇಂಪ್ರೂವ್‌ಮೆಂಟ್ ಟ್ರಸ್ಟ್ ಬೋರ್ಡ್‌ಗಳ ಪರ್ಮಿಷನ್ ಇಲ್ಲದೆ, ನೀವೇ ಮಾಡಿಕೊಟ್ಟಿರುವ ಪ್ರಕರಣಗಳಿವೆ. ಅದನ್ನೇ ಬಾಗಲಕೋಟೆಗೂ ಅನ್ವಯ ಮಾಡಬಹುದು. ಬಾಗಲಕೋಟೆ ಪ್ರದೇಶವನ್ನು ಇಟ್ಟುಕೊಂಡು, ಈಗಿರುವ ಟ್ರಸ್ಟ್ ಬೋರ್ಡ್‌ಗಳು ಗೌರವದಿಂದ ನಡೆದುಕೊಂಡು ಹೋಗುತ್ತಿವೆ, ಅಂಥದ್ದರಲ್ಲಿ ಬಲ್ಕ್ ಲ್ಯಾಂಡ್ ಅನ್ನು ಬೇರೆಯವರಿಗೆ ಅಲಾಟ್ ಮಾಡಲು ಹೊರಟರೆ ಹೇಗೆ? ಜನತಾದಳ ಸರ್ಕಾರವಿದ್ದಾಗ, ದೊಡ್ಡ ದೊಡ್ಡ ವಿಚಾರಗಳನ್ನು ತಾವೇ ಹೇಳಿ, ವಿರೋಧಿಸಿದ್ದಿರಿ. ಬಲ್ಕ್ ಅಲಾಟ್‌ಮೆಂಟ್ ಅನ್ನು ಕ್ಯಾನ್ಸಲ್ ಮಾಡಿದ ಕೀರ್ತಿ ನಿಮಗೇ ಇದೆ. ಈಗ ಆಡಳಿತ ಪಕ್ಷ ಬಂದಿದೆ ಎಂದು, ತಾವೇ ಅದನ್ನು ಮರೆತು, ಅದನ್ನೇ ಮಾಡುವುದಕ್ಕೆ ಹೊರಟರೆ ಅರ್ಥಹೀನವಾದ ವಿಚಾರವಾಗುತ್ತದೆ.

ಶ್ರೀ ಬಿ.ಎನ್. ಬಚ್ಚೇಗೌಡ: ಅಭಿವೃದ್ಧಿ ಪ್ರಾಧಿಕಾರಗಳಲ್ಲಿ ಆ ಪ್ರಾವಿಜನ್ ಇರಲಿಲ್ಲ. It was confined to B.D.A., not in other Improvement Boards. ಇದು ಓಡಿಪಿ, ಸಿಡಿಪಿ ಎಂದಿದೆ. ಆ ನೋಟಿಫೈಡ್ ಲ್ಯಾಂಡ್‌ಗಳಲ್ಲಿ ಸ್ವಾಧೀನ ಮಾಡಿಕೊಂಡು ಅಲಾಟ್ ಮಾಡುವ, ಸೈಟ್ ಅಂಡ್ ಸರ್ವಿಸಸ್ ಅಧಿಕಾರ ಪ್ರಾಧಿಕಾರಗಳಿಗಿದೆ. ಈಗ ಅದನ್ನು ಬಾಗಲಕೋಟೆ ಎಂದು ಹೇಳಿ ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆಯಲ್ಲಿ ಹೇಳಿದ್ದಾರೆ. ಆದರೆ, ಇಲ್ಲಿ ಅಮೆಂಡ್‌ಮೆಂಟ್ ತಂದಿರುವುದು 37ಎಗೆ. ಅದು ತಪ್ಪಿದೆ ಎಂಬುದನ್ನು ಸಭೆಯ ಗಮನಕ್ಕೆ ತಂದು, ಅಧ್ಯಕ್ಷರ ಮೂಲಕ ಸಚಿವರಿಗೆ ಹೇಳುತ್ತಿದ್ದೇನೆ. ಮಾನ್ಯ ಸಚಿವರು ಇದರ ಬಗ್ಗೆ ಕ್ಲಾರಿಫೈ ಮಾಡಬೇಕು.

ಶ್ರೀ ಎ. ರಾಮದಾಸ್: ಲ್ಯಾಂಡ್ ಅಕ್ವಿಜಿಷನ್ ಆಕ್ಟ್‌ನಲ್ಲಿ ಸರ್ಕಾರ ಸ್ಪೆಷಲ್ ಪ್ರಾವಿಜನ್ ಮಾಡಿಕೊಂಡಿದೆ. ಸ್ಪೆಷಲ್ ಲ್ಯಾಂಡ್ ಅಕ್ವಿಜಿಷನ್ ಆಕ್ಟ್‌ನಡಿಯಲ್ಲಿ ಪ್ರಿಲಿಮಿನರಿ

ನೋಟಿಫಿಕೇಷನ್, ಹಿಯರಿಂಗ್ 51, 61 ಎಂದು ಹೇಳಿ, ಈ ಫೈನಲ್ ನೋಟಿಫಿಕೇಷನ್ ಮಾಡಲು ಸಮಯವಿದೆ. ಆ ಸಮಯವನ್ನು ತೆಗೆದು, ನೇರವಾಗಿ ಅಕ್ವಿಜಿಷನ್‌ಗೆ ಕೇವಲ ಒಂದು ತಿಂಗಳಿನಲ್ಲಿ ಹೋಗಲು ಒಂದು ಪ್ರಾವಿಜನ್ ಅನ್ನು ಬಿ. ಸೋಮಶೇಖರ್‌ರವರ ಕಾಲದಲ್ಲಿ ಅಮೆಂಡ್‌ಮೆಂಟ್ ತರಲಾಗಿತ್ತು. ನೇರವಾಗಿ ನೀವು 40 ದಿವಸಗಳಲ್ಲಿ ಆ ಭೂಮಿಯನ್ನು ಬೇಕಾಗಿರುವ ಹೌಸಿಂಗ್ ಸೊಸೈಟಿಗೆ ಕೊಡಲು ಪ್ರಾವಿಜನ್ ಮಾಡಿಕೊಳ್ಳಬಹುದು. ಹಾಗಿರುವ ಸಂದರ್ಭದಲ್ಲಿ, ಕೇವಲ ಬಾಗಲಕೋಟೆಯ ಗುರ್ತಿಟ್ಟುಕೊಂಡು, ಉದ್ದೇಶವಿಟ್ಟುಕೊಂಡು, ಇಡೀ ರಾಜ್ಯದಲ್ಲಿರುವ ಒಳ್ಳೊಳ್ಳಿಯ ಭೂಮಿಯನ್ನು ಬೇರೆ ಬೇರೆ ಹೌಸಿಂಗ್ ಸೊಸೈಟಿಗಳಿಗೆ, ಬೇಕಾಗಿರುವ ಅಸೋಷಿಯೇಷನ್‌ಗೆ ಕೊಡುವ ವಿಚಾರವೇನಿದೆ ಅದು ಮಾರಕವಾದುದು. ಅದನ್ನು ತೆಗೆದುಹಾಕಿ ಸೆಕ್ಷನ್ 109 ಏನಿದೆ ಅದನ್ನು ಅಪ್ಲೈ ಮಾಡಿ. ಅಥವಾ ಸ್ಪೆಷಲ್ ಲ್ಯಾಂಡ್ ಅಕ್ವಿಜಿಷನ್ ಆಕ್ಟ್‌ನಡಿಯಲ್ಲಿ ಮಾಡಿ. ಕೇವಲ ಗ್ರೂಪ್ ಹೌಸಿಂಗ್‌ಗೆ ಸ್ಪೆಷಲ್ ಪ್ರಾವಿಜನ್ ಮಾಡಿದ್ದೀರಿ. ಗ್ರೂಪ್ ಹೌಸಿಂಗ್‌ಗೆ ಹೋಗಬೇಕೆಂದರೆ, ನೀವು ಸ್ಪೆಷಲ್ ಲ್ಯಾಂಡ್ ಅಕ್ವಿಜಿಷನ್ ಆಕ್ಟ್‌ನಡಿಯಲ್ಲಿ ಭೂಮಿಯನ್ನು ಯಾವ ಉದ್ದೇಶಕ್ಕೆ ಯೂಸ್ ಮಾಡುತ್ತೀರೋ, ಅದೇ ಉದ್ದೇಶಕ್ಕಾಗಿ ಅಲಿನೇಷನ್ ಆಗಬೇಕಾದ ಅವಶ್ಯಕತೆ ಇಲ್ಲ. ಯಾವ ಉದ್ದೇಶಕ್ಕಾಗಿ ಕ್ಲಾಜ್ ತೋರಿಸಿದ್ದೀರೋ, ಅದರಡಿಯಲ್ಲಿ ಗ್ರೂಪ್ ಹೌಸಿಂಗ್‌ಗೆ ನೇರವಾಗಿ ಕಟ್ಟಲು ಪ್ರಾವಿಜನ್ ಇದೆ. ಅದರಡಿಯಲ್ಲಿ ಅಕ್ವೈರ್ ಮಾಡಿ ಕೊಡುವುದಾದರೆ ನಮ್ಮೆಲ್ಲರ ಸ್ವಾಗತವಿದೆ. ಅಥವಾ ತಾವು ಕಾರಿಜೆಂಡಂ ಮಾಡಿ, ಬಾಗಲಕೋಟೆಗೆ ಮಾತ್ರ ಅನ್ವಯವೆಂದು ಮಾಡಿದರೆ ನಮ್ಮ ಅಭ್ಯಂತವಿಲ್ಲ.

ಶ್ರೀ ಬಿ. ಸೋಮಶೇಖರ್ (ಮಳವಳ್ಳಿ): ಕಾಗೋಡು ತಿಮ್ಮಪ್ಪನವರು, ಬಿಡಿಎ ಆಕ್ಟ್‌ಗೆ ಎಂಎಲ್‌ಎ ಹೌಸಿಂಗ್ ಕೋ ಆಪರೇಟೀವ್ ಸೊಸೈಟಿಗಳಿಗೆ ಹೊರತುಪಡಿಸಿ ಎಂದು ಹೇಳಿದ್ದಾರೆ, ಅದೇ ಮಾದರಿಯಲ್ಲಿ ಇದನ್ನೂ ತಂದಿದ್ದೇವೆಂದಿದ್ದಾರೆ. ಅದು ಬಿಡಿಎನಲ್ಲಿದೆ. ಶಾಸಕರ ಸಹಕಾರ ಸಂಘಗಳಿಗೆ ಕೊಡುವುದಕ್ಕೆ ಮಾಡಿದ್ದೀರಿ. ಇಲ್ಲಿ ಬಾಗಲಕೋಟೆಗೆ ಸೀಮಿತವೆಂದು ಹೇಳಿದ್ದರೆ ಸಾಕಾಗುತ್ತಿತ್ತು. ರಾಮದಾಸ್‌ರವರು ಹೇಳಿದ ಹಾಗೆ, ಇದರಲ್ಲಿ ಅನೇಕ ವಿಧಾನಗಳಿವೆ. ನಮ್ಮ ಸೆಕ್ಷನ್ 109 ಲ್ಯಾಂಡ್ ರಿಫಾರ್ಮ್ಸ್ ಆಕ್ಟ್‌ನಲ್ಲಿ ಪರ್ಚೇಸ್ ಮಾಡುವ ಅವಕಾಶವಿತ್ತು. ಅದಲ್ಲದೆ, ನಮ್ಮ ಕಾಲದಲ್ಲಿ ಇದಕ್ಕೋಸ್ಕರ ನಾವು ಮಾಡಿದ ತಿದ್ದುಪಡಿ ಎಂದರೆ, ವಿಥೌಟ್ ನೋಟಿಫೈ ಇಟ್, ಕನ್‌ಸೆಂಟ್ ಅವಾರ್ಡ್ ಪ್ರಕಾರ ಮಾಡುವ ಪ್ರಮುಖ ಹೆಜ್ಜೆಯನ್ನು ನಮ್ಮ ಸರ್ಕಾರವಿಟ್ಟಿತ್ತು. ಅದರಿಂದಾಗಿ, ಎಷ್ಟೋ ಲಿಟಿಗೇಷನ್ ಕಡಿಮೆಯಾಗಿ, ಸರ್ಕಾರದ ಹಣ ಪೋಲಾಗುವುದು ತಪ್ಪಿತು. ತಾವು ಅದರ ಪ್ರಕಾರ ಮಾಡಬಹುದು. ಚಾರಿಟೆಬಲ್ ಟ್ರಸ್ಟ್, ಅಸೋಷಿಯೇಷನ್, ರಿಜಿಸ್ಟರ್ಡ್ ಆರ್ಗನೈಜೇಷನ್ ಇರಬಹುದು. ಇವರೆಲ್ಲ ಸೆಕ್ಷನ್ 109 ರಡಿಯಲ್ಲಿ ಪರ್ಚೇಸ್ ಮಾಡುತ್ತಿದ್ದಾರೆ. ಎಲ್ಲದಕ್ಕೂ ಬ್ಲ್ಯಾಂಕ್ ಚೆಕ್ ಕೊಟ್ಟಂತೆ, ಆಲಮಟ್ಟಿ ಅಣೆಕಟ್ಟು ಕಾರಣ ತೋರಿಸಿ ಇದನ್ನು ಫ್ರೀಯಾಗಿ ಕೊಟ್ಟ ಹಾಗೆ ಕಾಣಿಸುತ್ತಿದೆ. ಉದ್ದೇಶಪೂರ್ವಕವಾಗಿ ಮಾಡುತ್ತೀರೋ, ಪ್ರಿಂಟಿಂಗ್ ಮಿಸ್ಟೇಕೋ ನನಗೆ ಗೊತ್ತಾಗುತ್ತಿಲ್ಲ. ಅದನ್ನು ಆಲಮಟ್ಟಿಗೆ ಸೀಮಿತವಾಗಿ ಮಾಡಿಕೊಳ್ಳಿ. ಇಲ್ಲದಿದ್ದರೆ, ಗೊಂದಲವಾಗುತ್ತದೆ.

ಶ್ರೀ ಬಿ.ಬಿ. ಚಿಮ್ಮನಕಟ್ಟಿ (ನಗರಾಭಿವೃದ್ಧಿ ಸಚಿವರು): ಸನ್ಯಾಸ್ಯ ಪೂಜಾರ್, ಬಚ್ಚೇಗೌಡರು, ಸುರೇಶ್‌ಕುಮಾರ್, ರಾಮದಾಸ್, ಸೋಮಶೇಖರ್‌ರವರು ಕೆಲವು ಅನುಮಾನಾಸ್ಪದ

ವಿಚಾರಗಳನ್ನು ಹೇಳಿದ್ದಾರೆ. ಅದರಲ್ಲಿ ವಿಶೇಷ ಎಂದರೆ, ನಮ್ಮ ಸುರೇಶ್‌ಕುಮಾರ್ ಹಾಗೂ ರಾಮದಾಸ್‌ರವರು ಎತ್ತಿರುವ ಮೂಲ ಪ್ರಶ್ನೆ ಎಂದರೆ, ಈಗಾಗಲೇ ಬಲ್ಕ್ ಅಲಾಟ್‌ಮೆಂಟ್ ಏನು ಮಾಡುತ್ತಿದ್ದೇವೆ, ಅದನ್ನು ಹಿಂದೆ ಬ್ಯಾನ್ ಮಾಡಿದ್ದೇವೆ.

3.40 ಪಿ.ಎಂ

ಅದರ ದುರುಪಯೋಗ ಹಾಗೂ ದುಷ್ಪರಿಣಾಮಗಳಾದ ಮೇಲೆ ನಾವು ಅದನ್ನು ನಿಲ್ಲಿಸಿದ್ದೇವೆ. ಎಲ್ಲಾ ಫ್ಲಡ್ ಗೇಟ್ ಓಪನ್ ಮಾಡಿದ ಹಾಗೆ ಆಗುವುದಲ್ಲವೆ ಎಲ್ಲಾ ಅಭಿವೃದ್ಧಿ ಪ್ರಾಧಿಕಾರಗಳಿಗೆ ಎಲ್ಲಾ ಸಿಟಿಯೊಳಗೆ ಈ ಸವಲತ್ತು ಕೊಟ್ಟರೆ ದುರುಪಯೋಗವಾಗುತ್ತದೆ ಎನ್ನುವ ಏನು ಅನುಮಾನ ಇದೆ, ಅದಕ್ಕೆ ನಾನು ಸ್ಪಷ್ಟವಾಗಿ ಒಂದು ಭರವಸೆ ಕೊಡುತ್ತೇನೆ. ಇದು ಕೇವಲ ಬಾಗಲಕೋಟೆ ಪಟ್ಟಣಕ್ಕೆ ಮಾತ್ರ ಸೀಮಿತವಾಗಿದಿಯೇ ವಿನಹ ಉಳಿದ ಯಾವ ಪಟ್ಟಣಕ್ಕೂ ಇದನ್ನು ನಾವು ಅಪ್ಲೈ ಮಾಡುವುದಿಲ್ಲ. ಇನಕ್ಕೆ ಏಕೆ ಈ ವಿಶೇಷತೆ ಎಂದರೆ, ಈ ಪಟ್ಟಣ ಸುಮಾರು 30 ವರ್ಷಗಳಿಂದಲೂ ಇದು ಬೆಳೆಯಬೇಕು ಎನ್ನುವ ಬಹಳ ದೂರ ದೃಷ್ಟಿಯಿಟ್ಟುಕೊಂಡು ಎಷ್ಟೋ ಯೋಜನೆಗಳನ್ನು ಮಾಡಿದರೂ ಇದು ಸಾಧ್ಯವಾಗುತ್ತಿಲ್ಲ. ಇವತ್ತು ಪುನರ್ ವಸತಿ ಮಾಡತಕ್ಕಂಥವರಿಗೆ ಆರ್ ಅಂಡ್ ಆರ್ ಇದ್ದು ಅಲ್ಲಿ ಸೈಟ್ ಕೊಟ್ಟು ಎಲ್ಲಾ ಸವಲತ್ತುಗಳನ್ನು ಕೊಡುತ್ತೇವೆ, ಆದರೆ ಸಬಮರ್ಷನ್ ಆಗದಿರುವ ಕೆಲವರಿಗೆ ಹಾಗೂ ಬಾಡಿಗೆ ಮತಿಂಯಂದ ಇರುವ ಜನರಿಗೆ ಹಾಗೂ ಕೆಲವರು ಸೊಸೈಟಿ ಮಾಡಿಕೊಂಡಿರುವವರಿಗೆ ಇವರೆಲ್ಲರಿಗೂ ಆ ಸೊಸೈಟಿ ಮೂಲಕ ಬಲ್ಕ್ ಅಲಾಟ್‌ಮೆಂಟ್ ಮಾಡಿದರೆ ಆ ಪಟ್ಟಣ ಅಭಿವೃದ್ಧಿಯಾಗಬೇಕೆನ್ನುವ ಸದುದ್ದೇಶದಿಂದ ಮಾಡಿದ್ದೇವೆಯೇ ಹೊರತು ಬೇರೆ ಇವರಲ್ಲಿ ಏನೂ ಇಲ್ಲ. ಅದರ ಜೊತೆಗೆ ಆ ಪಟ್ಟಣಕ್ಕೆ ಕೊಟ್ಟಿರುವ ವಿಶೇಷ ಸೌಲಭ್ಯಗಳನ್ನು ಬೇರೆ ಪಟ್ಟಣಗಳಿಗೆ ಕೊಡುವುದಿಲ್ಲ ಎನ್ನುವುದನ್ನು ನಾನು ಸ್ಪಷ್ಟಪಡಿಸುತ್ತೇನೆ. ಇದರ ಜೊತೆಗೆ ಡಿ-ನೋಟಿಫಿಕೇಷನ್ ಮಾಡುವುದಕ್ಕೆ ನಮ್ಮ ಸರ್ಕಾರದಲ್ಲಿ ಒಂದು ಸಮಿತಿಯನ್ನು ಮಾಡಿದ್ದೇವೆ, ಇದರಲ್ಲಿ ಡಿಲೇಯಾಗುವಂಥ ಪ್ರೋಸೆಸ್ ಯಾವುದೂ ಮಾಡುವುದಿಲ್ಲ. ಮಾನ್ಯ ಸೋಮಶೇಖರ್‌ರವರು ಹೇಳಿದಂತೆ ಕನ್‌ಸೆಂಟ್ ತೆಗೆದುಕೊಳ್ಳುವುದಕ್ಕೆ ಕೂಡ ಪ್ರಯತ್ನಿಸುತ್ತಿದ್ದೇವೆ. ಎಲ್ಲಿ ಕನ್‌ಸೆಂಟ್ ಅವಾರ್ಡ್ ಆಗುತ್ತವೆ ಅಲ್ಲಿ ತಕ್ಷಣವೇ ಜಮೀನುಗಳನ್ನು ತೆಗೆದುಕೊಂಡು ಬಡಾವಣೆ ಮಾಡುವಂಥ ಕೆಲಸವನ್ನು ಈಗಾಗಲೇ ಮಾಡುತ್ತಿದ್ದು, ತಾವು ಯಾರೂ ಇದರ ಬಗ್ಗೆ ಅನುಮಾನಪಡುವುದು ಬೇಡ ಎಂದು ಹೇಳುತ್ತಾ, ಮಾನ್ಯ ಸದಸ್ಯರು ಇದಕ್ಕೆ ಒಪ್ಪಿಗೆ ನೀಡಬೇಕೆಂದು ಕೇಳುತ್ತೇನೆ.

ಶ್ರೀ ಎಸ್. ಸುರೇಶ್‌ಕುಮಾರ್: ಸಚಿವರು ಒಂದು ವಿವರಣೆಯನ್ನು ಕೊಡಲಿಲ್ಲ. ಕೆಲವು ಅಂಗಡಿಗಳಲ್ಲಿ ಏನು ಮಾಡುತ್ತಾರೆಂದರೆ, ತೋರಿಸುವಾಗ ಒಂದು ತೋರಿಸಿ ಮಾರುವಾಗ ಬೇರೆಯದನ್ನು ಪೊಟ್ಟಣ ಕಟ್ಟಿ ಕೊಡುತ್ತಾರೆ. ನೀವು ಇಲ್ಲಿ ತೋರಿಸಿ ಹೇಳುವುದು ಬಾಗಲಕೋಟೆ ಮತ್ತು ಆಲಮಟ್ಟಿ ಅಣೆಕಟ್ಟು, ಆದರೆ ನೀವು ತಂದಿರುವ ಈ ಶಿದ್ದುಪಡಿಯಲ್ಲಿ ಬಾಗಲಕೋಟೆಗೆ ಮಾತ್ರ ಸೀಮಿತ ಎಂದು ಎಲ್ಲಿದೆ?

ಶ್ರೀ ಬಿ.ಬಿ. **ಚಿಮ್ಮನಕಟ್ಟಿ:** ತಿದ್ದುಪಡಿಯಲ್ಲಿ ನಾವು ಸ್ಪಷ್ಟವಾಗಿ ಬಾಗಲಕೋಟೆಗೆ ಮಾತ್ರ ಎಂದು ತಿಳಿಸಿದ್ದೇವೆ. ಇದರ ಜೊತೆಗೆ ಈ ಸದನದಲ್ಲೂ ಕೂಡ ನಾನು ಭರವಸೆ ಕೊಡುತ್ತೇನೆ.

ಶ್ರೀ ಎಸ್. **ಸುರೇಶ್‌ಕುಮಾರ್:** ಅದು ಎಲ್ಲಿದೆ ಎಂದು ಓದಿ ಹೇಳಿ.

(ಗೊಂದಲ)

ಶ್ರೀ ಬಿ. **ಸುರೇಶ್‌ಕುಮಾರ್:** ಹಾಗಾದರೆ ಇದನ್ನು ರೀಡ್ರಾಫ್ಟ್ ಮಾಡಿಕೊಂಡು ತನ್ನಿ. ಇದರಲ್ಲಿ ಗೊಂದಲ ಬರುವುದರಿಂದ ನಾವು ಈ ಮಾತನ್ನು ಹೇಳಬೇಕಾಗುತ್ತದೆ.

(ಗೊಂದಲ)

ಶ್ರೀ ಬಿ.ಬಿ. **ಚಿಮ್ಮನಕಟ್ಟಿ:** ಸದನ ಎಂದರೆ ಸುಪ್ರೀಂ ಅಲ್ಲವೆ?

ಶ್ರೀ ಎ. **ರಾಮದಾಸ್:** ಹಾಗಾದರೆ ತಿದ್ದುಪಡಿ ಕೊಟ್ಟರೆ ನಾವು ಒಪ್ಪುತ್ತೇವೆ.

ಶ್ರೀ ಬಿ.ಬಿ. **ಚಿಮ್ಮನಕಟ್ಟಿ:** ಇಂಪ್ರೂವ್‌ಮೆಂಟ್ ಟ್ರಸ್ಟ್ ಇರುವುದು ಕೇವಲ ಬಾಗಲಕೋಟೆಗೆ ಮಾತ್ರ. ಇದಾದ ಮೇಲೆ 1984ರಲ್ಲಿ ಡೆವಲಪ್‌ಮೆಂಟ್ ಅಥಾರಿಟಿಗಳು ಕಾನ್‌ಸ್ಟಿಟ್ಯೂಟ್ ಆಗಿವೆ. ಇವುಗಳು ಆದಮೇಲೆ ಇಂಪ್ರೂವ್‌ಮೆಂಟ್ ಟ್ರಸ್ಟ್ ಎಂದು ನಾವು ಹೆಚ್ಚು ಎಗ್ಸಿಸ್ಟೆನ್ಸ್ ಮಾಡಲಿಲ್ಲ. ಆದರೆ ಬಾಗಲಕೋಟೆಗೆ ಮಾತ್ರ ಇಂಪ್ರೂವ್‌ಮೆಂಟ್ ಟ್ರಸ್ಟ್ ತಂದಿರುವುದು, ಇದನ್ನು ಬೇರೆ ಯಾವ ಸಿಟಿಯಲ್ಲೂ ಇಟ್ಟಿಲ್ಲ. ಇದನ್ನು ಏಕೆ ಬಾಗಲಕೋಟೆಯಲ್ಲಿ ಉಳಿಸಿಕೊಂಡರು ಎಂದರೆ ಈ ಪಟ್ಟಣ ಅಭಿವೃದ್ಧಿಯಾಗಲಿ ಎನ್ನುವ ದೃಷ್ಟಿಯಿಂದ ಉಳಿಸಿಕೊಂಡರೆ ವಿನಹ ಬೇರೆ ಯಾವ ಪಟ್ಟಣದಲ್ಲೂ ಸಿಟಿ ಇಂಪ್ರೂವ್‌ಮೆಂಟ್ ಟ್ರಸ್ಟ್ ಇಲ್ಲ. ಬಾಗಲಕೋಟೆಯಲ್ಲಿ ಬಿಟ್ಟರೆ ರಾಜ್ಯದ ಬೇರೆ ಯಾವ ಪಟ್ಟಣದಲ್ಲೂ ಇಲ್ಲ.

Sri B.N. Bachegowda: If it is going to be confined only to Bagalkot town, ಎಂದು ಹೇಳುವುದಾದರೆ ಇದಕ್ಕೆ ನಮ್ಮದೇನೂ ಅಭ್ಯಂತರವಿಲ್ಲ.

ಶ್ರೀ ಬಿ.ಬಿ. **ಚಿಮ್ಮನಕಟ್ಟಿ:** ನಾನು ಉದ್ದೇಶದಲ್ಲಿ ಬಾಗಲಕೋಟೆಗೆ ಮಾತ್ರ ಎಂದು ಹೇಳಿದ್ದೇನೆ.

ಶ್ರೀ ಎಸ್. **ಸುರೇಶ್‌ಕುಮಾರ್:** ನೀವು ಇಲ್ಲಿ ಹೇಳಿದ್ದು ಆಶ್ವಾಸನೆ ಆಗುತ್ತದೆ. ಆದರೆ, ಮೂಲ ಕಾಯಿದೆಯಲ್ಲಿ ತಿದ್ದುಪಡಿ ಬಂದಾಗ ಸಚಿವರಾದ ಚಿಮ್ಮನಕಟ್ಟಿಯವರು ಈ ಆಶ್ವಾಸನೆ ಕೊಟ್ಟಿದ್ದರು ಎಂದು ಬರುತ್ತದೆಯೇ? .. ಬರುವುದಿಲ್ಲ ಅಲ್ಲವೆ? ಅವರು ಆಗಿರುವ ತಿದ್ದುಪಡಿ ನೋಡಿಕೊಂಡು ಅದರ ಪ್ರಕಾರ ಬಿಲ್ಸ್ ಅಲಾಟ್‌ಮೆಂಟ್ ಕೊಟ್ಟುಕೊಂಡು ಹೋಗುತ್ತಾರೆ. ಆದ್ದರಿಂದ, ಇದನ್ನು ರೀಡ್ರಾಫ್ಟ್ ಮಾಡಿ ಸರಿಯಾದ ತಿದ್ದುಪಡಿ ತೆಗೆದುಕೊಂಡು ಬನ್ನಿ. ಬಾಗಲಕೋಟೆಗೆ ಕೊಡುವುದಕ್ಕೆ ಯಾರಿಗೂ ಕೂಡ ವಿರೋಧವಿಲ್ಲ. ಆದರೆ ಅದರ ಹೆಸರಿನಲ್ಲಿ ಇಡೀ ಕರ್ನಾಟಕದ ಹೌಸಿಂಗ್ ಸೊಸೈಟಿಗಳಿಗೆ ಕೊಡುತ್ತೇವೆ, ರಿಲೀಜಿಸ್ ಟ್ರಸ್ಟ್‌ಗಳಿಗೆ ಕೊಡುತ್ತೇವೆ, ಇಂಥವೆಲ್ಲ ಈ ಸದನದ ಮೂಲಕ ಆಗುವುದು ಬೇಡ.

ಶ್ರೀ ಬಿ.ಎನ್. ಬಚ್ಚೇಗೌಡ: ಸಿಟಿ ಇಂಪ್ರೂವ್‌ಮೆಂಟ್ ಟ್ರಸ್ಟ್ ಬೋರ್ಡ್‌ಗಳು ಅಬಾಲಿಷ್ ಆಗಿವೆ. ಹಿಂದೆ ಬಲ್ಕ್ ಅಲಾಟ್‌ಮೆಂಟ್ ಇತ್ತು ಎಂದು ಹೇಳುತ್ತಾರೆ ಆದರೆ ಇದು ಇರಲಿಲ್ಲ. ಇದಕ್ಕೆ ಇವರು ಈಗ ತಿದ್ದುಪಡಿ ಮಾಡಿ ಈ ಬಲ್ಕ್ ಅಲಾಟ್‌ಮೆಂಟ್ ತರುತ್ತಿದ್ದಾರೆ. ಆದ್ದರಿಂದ, ಸಚಿವರು ಏನು ಹಿಂದೆ ಇತ್ತೆಂದು ಹೇಳಿದರು ಆ ಪಾಯಿಂಟ್ ಬಗ್ಗೆ ಮಾನ್ಯ ಸಚಿವರು ವಿವರಣೆ ಕೊಡಬೇಕು.

ಶ್ರೀ ಎಸ್. ಸುರೇಶ್‌ಕುಮಾರ್: ಮಾನ್ಯ ಕಾಗೋಡು ತಿಮ್ಮಪ್ಪನವರು ಹಿರಿಯ ಸಚಿವರು ಇಲ್ಲಿ ಇದ್ದಾರೆ ಬೇಕಾದರೆ ಅವರೇ ಹೇಳಲಿ. ನಮ್ಮ ಮುಂದೆ ಇರುವ ಈ ತಿದ್ದುಪಡಿಯಲ್ಲಿ ಉದ್ದೇಶಗಳು ಮತ್ತು ಕಾರಣಗಳು ಎಂದು ಇರುವುದು ನಮಗೆ ಮತ್ತು ಈ ಸದನಕ್ಕೆ. Will it become part of the amendment?

ಶ್ರೀ ಬಿ.ಬಿ. ಚಿಮ್ಮನಕಟ್ಟಿ: ಬಲ್ಕ್ ಅಲಾಟ್‌ಮೆಂಟ್ ಮಾಡುವಾಗ ಯಾವುದೇ ರೀತಿಯ ಸಂಸ್ಥೆಗಳಿಗಾಗಲಿ, ಶಿಕ್ಷಣ ಸಂಸ್ಥೆಗಳಿಗಾಗಲಿ, ಸೊಸೈಟಿಗಳಿಗಾಗಲಿ, ಸರಕಾರದ ಪರವಾನಗಿ ತೆಗೆದುಕೊಂಡು ಈ ಬಲ್ಕ್ ಅಲಾಟ್‌ಮೆಂಟ್ ಮಾಡಬೇಕು ಎನ್ನುವುದನ್ನೂ ಕೂಡ ಇದರಲ್ಲಿ ಹೇಳಿದ್ದೇವೆ.

ಶ್ರೀ ಎಸ್. ಸುರೇಶ್‌ಕುಮಾರ್: ಎಲ್ಲೋ ಒಂದು ಕಡೆ ನಮಗೆ ಕಮ್ಯುನಿಕೇಷನ್ ಗ್ಯಾಪ್ ಆಗುತ್ತದೆ. ನೀವು ಉದ್ದೇಶಗಳಲ್ಲಿ ಬಾಗಲಕೋಟೆಯನ್ನು ಕಿತ್ತು ಹಾಕಿ ಅಥವಾ ಇದರಲ್ಲಿ ಬಾಗಲಕೋಟೆಯನ್ನು ಸೇರಿಸಿ. ಈ ಎರಡೇ ಮಾರ್ಗ ಇರುವುದು. But it applies to any other Improvement Board. ಆದಾಗಬಾರದು.

ಶ್ರೀ ಬಿ.ಬಿ. ಚಿಮ್ಮನಕಟ್ಟಿ: ನಾನು ಇದನ್ನು ಕೇವಲ ಬಾಗಲಕೋಟೆ ಪಟ್ಟಣಕ್ಕೆ ಮಾತ್ರ ಸೀಮಿತ ಮಾಡಿದ್ದೇನೆಂದು ಬಹಳ ಸ್ಪಷ್ಟವಾಗಿ ಹೇಳುತ್ತೇನೆ.

ಶ್ರೀ ಕಾಗೋಡು ತಿಮ್ಮಪ್ಪ: ಕರ್ನಾಟಕ ಇಂಪ್ರೂವ್‌ಮೆಂಟ್ ಬೋರ್ಡ್ ಆಕ್ಟ್ ಏನು ಇದೆ ಇದು ಯಾವ ಸಿಟಿಯಲ್ಲೂ ಇಲ್ಲ, ಇದು ಕೇವಲ ಬಾಗಲಕೋಟೆಗೆ ಮಾತ್ರ ಉಪಯೋಗವಾಗುತ್ತದೆ. ಏಕೆಂದರೆ, ಬೇರೆ ಸಿಟಿಗಳಿಗೆ ಅಭಿವೃದ್ಧಿ ಪ್ರಾಧಿಕಾರಗಳೆಂದು ಮಾಡಿದ್ದೇವೆ. ಆದ್ದರಿಂದ, ಈ ಆಕ್ಟ್ ಕೇವಲ ಬಾಗಲಕೋಟೆಗೆ ಮಾತ್ರ ಅನ್ವಯಿಸುತ್ತದೆ.

ಶ್ರೀ ಬಿ.ಎನ್. ಬಚ್ಚೇಗೌಡ: ಸಿಟಿ ಇಂಪ್ರೂವ್‌ಮೆಂಟ್ ಟ್ರಸ್ಟ್ ಬೋರ್ಡ್ ಆಕ್ಟ್‌ನಿಂದಲೇ ಜಿಲ್ಲಾ ಅಭಿವೃದ್ಧಿ ಪ್ರಾಧಿಕಾರ ಮತ್ತು ಯೋಜನಾ ಪ್ರಾಧಿಕಾರಗಳೆಂದು ಕಾನೂನು ಮಾಡಿಕೊಂಡಿದ್ದು. Then there will be ODP for every city and also comprehensive Development Plan. ಇದಕ್ಕೆ ಸೀಮಿತಗೊಂಡಂತೆ ಭೂಸ್ವಾಧೀನಪಡಿಸಿಕೊಂಡು ಆದರೆ ನೋಟಿಫಿಕೇಷನ್ ಮಾಡಿ ಸೈಟ್ ಅಂಡ್ ಸರ್ವೀಸಸ್ ಮಾಡುವ ವ್ಯವಸ್ಥೆ ಇರುವುದು. ಆದರೆ ಇಲ್ಲಿ ಏನಾಗಿದೆ ಎಂದರೆ, ಬಾಗಲಕೋಟೆ ಸಿಟಿಗೆ ಸಿಟಿ ಇಂಪ್ರೂವ್‌ಮೆಂಟ್ ಟ್ರಸ್ಟ್ ಬೋರ್ಡ್ ಪ್ರಕಾರ ಮಾಡುತ್ತೇವೆಂದು ನಾವು ಪುನಃ ಹಿಂದಕ್ಕೆ ಹೋಗುತ್ತಿದ್ದೇವೆ. ಸಿಟಿ ಇಂಪ್ರೂವ್‌ಮೆಂಟ್ ಟ್ರಸ್ಟ್ ಬೋರ್ಡ್ ಎನ್ನುವ ಕಲ್ಪನೆ ಈಗ ಹೊರಟು ಹೋಗಿದೆ.

ಅಧ್ಯಕ್ಷರು: ಇಡೀ ರಾಜ್ಯದಲ್ಲಿ ಒಂದೇ ಸಿಟಿ ಇಂಪ್ರೂವ್‌ಮೆಂಟ್ ಟ್ರಸ್ಟ್ ಬೋರ್ಡ್ ಇದೆ ಎಂದು ಅವರು ಹೇಳುತ್ತಿದ್ದರಲ್ಲ.

ಶ್ರೀ ಬಿ.ಎನ್. ಬಚ್ಚೇಗೌಡ: ಅದು ಇದರಲ್ಲಿ ಇಲ್ಲವಲ್ಲ. That is not incorporated here. That is not stated here in this amendment.

ಶ್ರೀ ಬಿ. ಸೋಮಶೇಖರ್: ಎಲ್ಲವೂ ಇದಕ್ಕೆ "mutatis & mutandis ಆಗಿ ಟ್ರಾನ್ಸ್‌ಫರ್ ಆಗಿಬಿಡುತ್ತವೆ. ಅಮೇಲೆ ಆರ್ಡರ್ ಇಶ್ಯೂ ಆಗಿ ಈ ರೀತಿಯೇ ಆಗುತ್ತದೆ. ಆದ್ದರಿಂದ ತಾವು ಒಪ್ಪಿಕೊಂಡಿರುವ ಉದ್ದೇಶ ಅಮೆಂಡ್‌ಮೆಂಟ್‌ನಲ್ಲಿ ಬಂದು ಬಿಡಲಿ. ಉದ್ದೇಶದಲ್ಲಿ ಏನು ತೋರಿಸಿದಿರಿ ಅದೇ ರೀತಿ ಅಮೆಂಡ್‌ಮೆಂಟ್‌ನಲ್ಲಿ ತೋರಿಸಿಬಿಟ್ಟರೆ, ಚಾರಿಟೇಬಲ್ ಟ್ರಸ್ಟ್ ಇರಬಹುದು, ಅಸೋಸಿಯೇಷನ್ ಇರಬಹುದು ಇವೆಲ್ಲವನ್ನು ತೆಗೆದು ಬಿಟ್ಟರೆ ಆಗ ಅನುಕೂಲವಾಗುತ್ತದೆ.

ಶ್ರೀ ಪಿ.ಹೆಚ್. ಪೂಜಾರ್: 1984ರಲ್ಲಿ ಬಿಟಿಡಿಎ ಇತ್ತು. ಬಾಗಲಕೋಟೆ ಇಡೀ ನಗರ ಮುಳುಗುತ್ತಿವೆ, ಬೇರೆ ಕಡೆ ಭೂಸ್ವಾಧೀನಪಡಿಸಿಕೊಂಡು ಇಡೀ ನಗರವನ್ನು ಅಲ್ಲಿಗೆ ವರ್ಗಾವಣೆ ಮಾಡಬೇಕಾಗಿದೆ. ಈ ಹಿನ್ನೆಲೆಯಲ್ಲಿ ಉಳಿದ ಬಿಡಿಎ ಗಳಿಗೆ ನಮ್ಮ ಬಾಗಲಕೋಟೆಯಂತೆ ತೀರ್ಮಾನಿಸಬೇಡಿ, ಇದಕ್ಕಾಗಿ ವಿಶೇಷವಾದ ವ್ಯವಸ್ಥೆ ಮಾಡಿ, ಇದಕ್ಕಾಗಿ ವಿಶೇಷವಾದ ತಿದ್ದುಪಡಿ ಆಗಬೇಕು. ಬಾಗಲಕೋಟೆ ಡೆವಲಪ್‌ಮೆಂಟ್ ಅಥಾರಿಟಿ ಉಳಿದ ಬಿಡಿಎ ಗಳಂತೆ ಕೆಲಸ ಮಾಡಬಾರದು. ಉದಾಹರಣೆಗೆ ಬೆಂಗಳೂರಿನಲ್ಲಿ ಬೇರೆ ಕಡೆ ಸ್ವಾಧೀನಪಡಿಸಿಕೊಂಡು ಯಾರ್ಯಾರು ಅರ್ಜಿ ಹಾಕಿದ್ದಾರೆ ಅವರಿಗೆ ಅಲಾಟ್ ಮಾಡುತ್ತಿದ್ದಾರೆ, ಆದರೆ ಬಾಗಲಕೋಟೆಯಲ್ಲಿ ಯಾರು ಮುಳುಗಡೆ ಆಗಿ ತೊಂದರೆಗೆ ಒಳಗಾಗುತ್ತಾರೆ ಅವರಿಗೆ ಮಾತ್ರ ಕೊಡುವುದು. ಆದಕ್ಕಾಗಿ ಬಾಗಲಕೋಟೆಗೆ ಬೇರೆ ತೀರ್ಮಾನ ಮಾಡಿ ಎಂದು ಮನವಿ ಮಾಡುತ್ತೇನೆ.

ಶ್ರೀ ಎ. ರಾಮದಾಸ್: ಮಾನ್ಯ ಅಧ್ಯಕ್ಷರೆ, ನನ್ನ ಒಂದೇ ಒಂದು ಕ್ಲಾರಿಫಿಕೇಶನ್‌ಗೆ ಮಾನ್ಯ ಸಚಿವರು ಸ್ಪಷ್ಟೀಕರಣ ನೀಡಬೇಕೆಂದು ಕೇಳಿಕೊಳ್ಳುತ್ತೇನೆ. ಅದೇನೆಂದರೆ, ಕರ್ನಾಟಕ ಇಂಪ್ರೂವ್‌ಮೆಂಟ್ ಬೋರ್ಡ್ ಆಕ್ಟ್ 1976ರ ಅಡಿಯಲ್ಲಿ ಇಡೀ ರಾಜ್ಯದಲ್ಲಿ ಇದ್ದಂಥ ಎಲ್ಲಾ ಟ್ರಸ್ಟ್ ಬೋರ್ಡ್‌ಗಳು ಕ್ಲೋಜ್ ಆಗಿ, ಕೇವಲ ಬಾಗಲಕೋಟೆಗೆ ಬರುತ್ತದೆ ಎನ್ನತಕ್ಕಂಥ ಮಾತನ್ನು ಈ ಸದನದಲ್ಲಿ ತಾವು ಹೇಳಿದ್ದೀರಿ. ಹಾಗಾದರೆ, ಸಿಟಿ ಇಂಪ್ರೂವ್‌ಮೆಂಟ್ ಟ್ರಸ್ಟ್ ಬೋರ್ಡ್‌ನ್ನು ಮತ್ತು ಅಲ್ಲಿ ಇರತಕ್ಕಂಥ ಪ್ಲಾನಿಂಗ್ ಬೋರ್ಡ್, ಇವೆರೆಡನ್ನೂ ಕೂಡ ಮರ್ಜ್ ಮಾಡಿ ಈಗ ಅಥಾರಿಟಿ ಎಂದು ತಾವೇನು ಇಡೀ ರಾಜ್ಯದಲ್ಲಿ ಮಾಡಿದ್ದೀರಿ ಅದರಲ್ಲಿ ಎಕ್ಸ್‌ಕ್ಲೂಸೀವ್ ಆಫ್ ಬಾಗಲಕೋಟೆ ಎಂದು ನೀವು ಆಕ್ಟ್ ತಂದಿದ್ದರೆ ಈಗ ತಾವು ಮಾಡಿರತಕ್ಕಂಥದು ಸಿಂಧು ಆಗುತ್ತಿತ್ತು. ಇದನ್ನು ಸರಿಪಡಿಸಿದರೆ ಮುಂದೆ ನಾವೇನು ಹೇಳುವುದಕ್ಕೆ ಹೋಗುವುದಿಲ್ಲ.

ಶ್ರೀ ಬಿ.ಬಿ. ಚಿಮ್ಮನಕಟ್ಟಿ: ಯಾವುದೇ ರೀತಿಯ ದುರುಪಯೋಗವಾಗುವುದಿಲ್ಲ ಎಂದು ನಾನು ಪ್ರಾರಂಭದಲ್ಲಿಯೇ ಹೇಳಿದ್ದೇನೆ. ಹಾಗೆಯೇ ಬೇರೆ ಬೇರೆ ಪಟ್ಟಣಗಳಿಗೆ ಇದು

ಅನ್ವಯಿಸುವುದಿಲ್ಲವೆಂದು ಸ್ಪಷ್ಟಪಡಿಸಿದ್ದೇನೆ. ಒಂದು ವೇಳೆ ಬೇರೆ ಬೇರೆ ಪಟ್ಟಣಗಳಲ್ಲಿ ಕೂಡ ಡೆವಲಪ್‌ಮೆಂಟ್ ಅಥಾರಿಟಿ ಮತ್ತು ಯೋಜನಾ ಪ್ರಾಧಿಕಾರಗಳು ಇರುತ್ತದೆ. ಇವುಗಳು ಅಭಿವೃದ್ಧಿ ಕೆಲಸ ಕಾರ್ಯಗಳನ್ನು ಮಾಡುವುದರ ಜೊತೆಗೆ ಈ ಇಂಪ್ರೂವ್‌ಮೆಂಟ್ ಆಕ್ಟ್ ಕೇವಲ ಬಾಗಲಕೋಟೆ ಪಟ್ಟಣದ ಅಭಿವೃದ್ಧಿ ದೃಷ್ಟಿಯಿಂದ ಇದನ್ನು ಮಾಡಲಾಗಿದೆ.

ಶ್ರೀ ಬಿ.ಎನ್. ಬಚ್ಚೇಗೌಡ: ಈಗಾಗಲೇ ಬಾಗಲಕೋಟೆಯಲ್ಲಿ, ಬಾಗಲಕೋಟೆ ಅಭಿವೃದ್ಧಿ ಪ್ರಾಧಿಕಾರ ಇರುವುದರಿಂದ ಮತ್ತೆ ಸಿಐಡಿಬಿ ಎಲ್ಲಿ ಬರುತ್ತದೆ?

ಶ್ರೀ ಕಾಗೋಡು ತಿಮ್ಮಪ್ಪ: ಈಗಾಗಲೇ ಇಂಪ್ರೂವ್‌ಮೆಂಟ್ ಬೋರ್ಡ್ ಆಕ್ಟ್ ಇದೆ. Karnataka Improvement Board is applicable to the entire State. ಇದರಲ್ಲಿ ಯಾವುದೇ ರೀತಿಯ ಡಿಸ್‌ಪ್ಯೂಟ್ ಇಲ್ಲ. ಆದರೆ ಈಗ ಏನು ಆಗಿದೆ ಎಂದರೆ, ಸಬ್‌ಸಿಡ್ಡೆಂಟ್ ಆಗಿ ಡೆವಲಪ್‌ಮೆಂಟ್ ಅಥಾರಿಟಿಗಳು ಬಂದು ಎಲ್ಲಾ ಅರ್ಬನ್ ಏರಿಯಾಗಳು ಕವರ್ ಆಗಿದ್ದು, ಈಗ ಬಾಗಲಕೋಟೆ ಪಟ್ಟಣ ಮಾತ್ರ ಉಳಿದಿದೆ. ಕರ್ನಾಟಕಕ್ಕೆ ಸೀಮಿತವಾಗಿರತಕ್ಕಂಥ ಕಾನೂನುಗಳು ಇದ್ದರೂ ಕೂಡ ಅದರ ಆಪರೇಶನ್ ಕೇವಲ ಬಾಗಲಕೋಟೆ ನಗರಕ್ಕೆ ಮಾತ್ರ.

ಶ್ರೀ ಎಸ್. ಸುರೇಶ್‌ಕುಮಾರ್: ಅಲ್ಲಿ ಇಂಪ್ರೂವ್‌ಮೆಂಟ್ ಬೋರ್ಡ್ ಇಲ್ಲ. ಅಲ್ಲಿ ಇರತಕ್ಕಂಥದ್ದು ಅಥಾರಿಟಿ ಮಾತ್ರ ಇದೆ.

ಶ್ರೀ ಕಾಗೋಡು ತಿಮ್ಮಪ್ಪ: ಬಾಗಲಕೋಟೆ ಟೌನ್ ಡೆವಲಪ್‌ಮೆಂಟ್ ಅಥಾರಿಟಿ ಇದೆ.

ಶ್ರೀ ಎ. ರಾಮದಾಸ್: ಈಗಾಗಲೇ ಅಲ್ಲಿ ಅಥಾರಿಟಿ ಇದೆ. ಆದ್ದರಿಂದ ಮತ್ತೆ ಬೋರ್ಡ್ ತರುವುದಕ್ಕೆ ಹೋಗಬೇಡಿ.

ಶ್ರೀ ಎಸ್. ಸುರೇಶ್‌ಕುಮಾರ್: ಮಾನ್ಯ ಅಧ್ಯಕ್ಷರೆ, ಇದು ಸ್ವಲ್ಪ ಗೊಂದಲದಲ್ಲಿರುವುದರಿಂದ let them review, let them come forward, with a re-amended amendment.

ಶ್ರೀ ಕೆ.ಎಚ್. ರಂಗನಾಥ್: ಮಾನ್ಯ ಅಧ್ಯಕ್ಷರೆ, ಮಾನ್ಯ ಸುರೇಶ್‌ಕುಮಾರ್‌ರವರು ಇದರಲ್ಲಿ ಏನು ಆ್ಯಂಬಿಗ್ವಿಟಿ ಇಟ್ಟುಕೊಂಡಿದ್ದಾರೆಯೋ ನನಗಂತೂ ಗೊತ್ತಾಗಲಿಲ್ಲ. 'This is a new section inserted, 37A. As it is in the act there is no provision to make bulk allotment. ಆದ್ದರಿಂದ ಜನರಲ್ ಆ್ಯಕ್ಟ್‌ನಲ್ಲಿ ಸೆಕ್ಷನ್ 37ಎ ಯನ್ನು ತಂದಿದ್ದಾರೆ. ಆದರೆ ಇದರ ಆ್ಯಕ್ಟಿವಿಟಿ ಯಾವುದಕ್ಕೆ ಎನ್ನತಕ್ಕಂಥದ್ದನ್ನು ಆಬ್ಜೆಕ್ಟ್ಸ್ ಆ್ಯಂಡ್ ರೀಜನ್ಸ್‌ನಲ್ಲಿ, ಇದು ಕೇವಲ ಬಾಗಲಕೋಟೆಗೆ ಸೀಮಿತವಾಗಿದೆ ಎಂದು ಹೇಳಿದ್ದಾರೆ.

ಶ್ರೀ ಎಸ್. ಸುರೇಶ್ ಕುಮಾರ್: ನೀವೇ ಹೀಗೆ ಹೇಳಿದರೆ ಹೇಗೆ? ಇದು ನಮಗೆ ಹೇಳುವುದಕ್ಕೆ ಮಾತ್ರ ಇರುವುದು. Will it become part of the Act?

Sri K.H. Ranganath: Part of the Act. Sec. 2 Insertion of a new Section, Sec. 37-A. 37-A is, Powers of Board to make bulk allotment. In this present amendment, you will have to read the Preamble and Ojbects. In the Objects and reasons, "It is considered necessary to amend the Karnataka Improvement Boards Act, 1976 (Karnataka Act No. 11/76) to incorporate Sec. 37-A, to provide for bulk allotment of land to Group Housing Societies in Bagalkot Town." It only restricts to that activity. This particular Sec. 37-A, as it is, going to be amended and going to be approved this House. It has been made quite clear ನಾಳೆ ರಮಸ ಈ ಆಕ್ಟ್ ಪ್ರಿಂಟ್ ಆಗಿ ಬಂದ ಮೇಲೆ ಇದನ್ನು ಹಾಕುವುದಿಲ್ಲ ಇದನ್ನು ನಾನು ಒಪ್ಪಿಕೊಳ್ಳುತ್ತೇನೆ. But when, the intention is going to be read by the Court, the Objects and reasons will be taken into consideration, at the time of interpretation. ಇಂಟರ್‌ಪ್ರಿಟೇಶನ್ ಮಾಡುವಂಥ ಸಂದರ್ಭದಲ್ಲಿ ಕೋರ್ಟ್ ಇದನ್ನು ತೆಗೆದುಕೊಳ್ಳುತ್ತದೆ. It is only restricted, only for this purpose, these few clauses is introduced nothing is hidden here.

ಶ್ರೀ ಈಗೋಡು ತಿಮ್ಮಪ್ಪ: ಕರ್ನಾಟಕ ಇಂಪ್ರೂವ್‌ಮೆಂಟ್ ಬೋರ್ಡ್ ಆಕ್ಟ್ 1976, ಇದರಲ್ಲಿ ಸೆಕ್ಷನ್ 12ಎ ಗೆ ಚಾಪ್ಟರ್ ಸೆಕೆಂಡ್-ಎ ಎಂದು ಒಂದು ತಿದ್ದುಪಡಿ ಮಾಡಿ ಸೆಕ್ಷನ್ 12ಎ ಗೆ ಬಾಗಲಕೋಟೆ ಟೌನ್ ಡೆವಲಪ್‌ಮೆಂಟ್ ಅಥಾರಿಟಿ ಎನ್ನತಕ್ಕಂಥ ಚಾಪ್ಟರ್‌ನ್ನು ಸೇರಿಸಲಾಗಿದೆ. ಇದರಲ್ಲಿ ಡೆಫಿನೇಷನ್ ಸೆಕ್ಷನ್ ಎರಡರ ಪ್ರಕಾರ.

> In this Act, unless the context otherwise requires, Bagalkot Town area means, the area comprising Bagalkot City....
>
> Secondly, the Board means, Improvement Board established under Sec. 3 for any urban area and includes Bagalkot Town Development Authority Constituted under Sec. 12-A.

Sri S. Suresh Kumar: Bagalkot Town is included. It is not exclusively for Bagalkot Town.

ಶ್ರೀ ಈಗೋಡು ತಿಮ್ಮಪ್ಪ: ಅವಕ್ಕೋಸ್ಕರವೇ ಈಗ ಇರತಕ್ಕಂಥ ಇಂಪ್ರೂವ್‌ಮೆಂಟ್ ಬೋರ್ಡ್ ಆಕ್ಟ್ ಆಪರೇಶನ್ಸ್‌ನ್ನು nowhere it is under operation, except Bagalkot.

ಶ್ರೀ ಬಿ.ಎಸ್. ಬಚ್ಚೇಗೌಡ: ಮಾನ್ಯ ಅಧ್ಯಕ್ಷರೆ, ಇಡೀ ರಾಜ್ಯದಲ್ಲಿ ಡೆವಲಪ್‌ಮೆಂಟ್ ಅಥಾರಿಟಿ ಎಂದಿದೆ. ಇದರ ಪ್ರಕಾರ ಇವತ್ತು ಬಾಗಲಕೋಟೆಯಲ್ಲಿಯೂ ಕೂಡ ಬಾಗಲಕೋಟೆ

ಟೌನ್ ಡೆವಲಪ್‌ಮೆಂಟ್ ಅಥಾರಿಟಿ ಇದೆ. ಬೆಂಗಳೂರಿನಲ್ಲಿ ಮೊದಲು ಸಿಐಟಿಬಿ ಇತ್ತು. ಅನಂತರ ಇದನ್ನು ತೆಗೆದುಹಾಕಲಾಯಿತು. ಇದನ್ನು ತೆಗೆದು ಹಾಕಿದ ಮೇಲೆ ಮತ್ತೆ ಬಿಡಿಎ ಮಾಡಲಾಯಿತು. ಈ ಒಂದು ಆಧಾರದ ಇದನ್ನು ಇಡೀ ರಾಜ್ಯದಲ್ಲಿ ಮಾಡಲಾಗಿದೆ. ಬಾಗಲಕೋಟೆಯಲ್ಲಿ ಬಿಟಿಡಿಎ ಇದೆ. ಆದರೆ ಸಿಐಟಿಬಿ ಇಲ್ಲ. ಆದ್ದರಿಂದ ಮತ್ತೆ ಸಿಐಟಿಬಿಯನ್ನು ತೆಗೆದುಕೊಂಡು ಬರಲಾಗುತ್ತದೆಯೇ ಎಂದು ಮಾನ್ಯ ಪೂಜಾರವರು ಕೇಳುತ್ತಿದ್ದಾರೆ. ಮಾನ್ಯ ಹಿರಿಯರಾದಂಥ ರಂಗನಾಥ್‌ರವರು ಸೆಕ್ಷನ್ 37(ಎ) ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಆದರೆ, ಸೆಕ್ಷನ್ 37(ಎ) ಯಲ್ಲಿ ಬಲ್ಕ್ ಅಲಾಟ್‌ಮೆಂಟ್‌ಗೆ ಪ್ರಾವಿಜನ್ ಇಲ್ಲಿಯವರೆಗೆ ಇರಲಿಲ್ಲ. ಇದು ಎಲ್ಲರಿಗೂ ಅಪ್ಲೈ ಆಗಬೇಕೆಂದು ಮಾನ್ಯ ಸಚಿವರಿಗೆ ಮನಸ್ಸಿದೆ. ನಮಗೆ ಬಲಗಡೆ ಕೇವಲ ಬಾಗಲಕೋಟೆ ಎಂದು ಹೇಳುತ್ತಾರೆ. ಆದರೆ ಎಡಗಡೆ ಎಲ್ಲಾ ಅಭಿವೃದ್ಧಿ ಪ್ರಾಧಿಕಾರಗಳ ಉದ್ದೇಶ ಇಟ್ಟುಕೊಂಡಿದ್ದಾರೆ. ಉದ್ದೇಶಗಳು ಮತ್ತು ಕಾರಣಗಳು ಹೇಳಿಕೆ ಪ್ಯಾರಾದಲ್ಲಿ ಇರತಕ್ಕಂಥ ಅಂಶವನ್ನು ಮತ್ತೆ ಅಮೆಂಡ್‌ಮೆಂಟ್ ತಂದಿರತಕ್ಕಂಥ ಆಕ್ಟ್‌ನಲ್ಲಿ ಪ್ರಸ್ತಾಪ ಮಾಡತಕ್ಕಂಥ ಅವಶ್ಯಕತೆ ಇಲ್ಲವೆಂದು ಮಾನ್ಯ ರಂಗನಾಥ್‌ರವರು ಹೇಳುತ್ತಾರೆ. ಹಾಗಾದರೆ, ಮಾನ್ಯ ಸಚಿವರು ಈ ಸದನದಲ್ಲಿ ಒಂದು ಹೇಳಿಕೆಯನ್ನು ಕೊಟ್ಟರೆ ಅದು ಅಮೆಂಡ್‌ಮೆಂಟ್‌ನಲ್ಲಿ ಸೇರುತ್ತದೆಯೇ? ಒಂದು ವೇಳೆ ಸಚಿವರು ಹೇಳಿರತಕ್ಕಂಥದ್ದು ಇಲ್ಲಿ ಇನ್‌ಕಾರ್ಪೊರೇಟ್ ಆಗುತ್ತದೆಂದು ಮಾನ್ಯ ರಂಗನಾಥ್‌ರವರು ಹೇಳಿದರೆ ನಾನು ಒಪ್ಪಿಕೊಳ್ಳುತ್ತೇನೆ. ಹಿರಿಯ ಸಚಿವರಾಗಿರತಕ್ಕಂಥ ರಂಗನಾಥ್‌ರವರು ಇದರ ಬಗ್ಗೆ ಕ್ಲಾರಿಫೈ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಬಾಗಲಕೋಟೆ ಉದ್ದೇಶ ಉಟ್ಟುಕೊಂಡು ತಾವು ಸದರಿ ತಿದ್ದುಪಡಿಯನ್ನು ತಂದಿದ್ದೀರಿ. ಆದ್ದರಿಂದ ಎಕ್ಸೆಪ್ಟ್ ಬಾಗಲಕೋಟೆ ಎಂದು ಹೇಳಿ. ಎಕ್ಸೆಪ್ಟ್ ಬಾಗಲಕೋಟೆ ಎನ್ನತಕ್ಕಂಥ ಪದವನ್ನು ಸೇರಿಸುವುದರಲ್ಲಿ ಏನು ತಪ್ಪಿದೆ? ಇದು ಬಾಗಲಕೋಟೆಗೆ ಸೀಮಿತವಾಗಿರುವುದರಿಂದ ಈ ಪದವನ್ನು ತಾವು ಏಕೆ ಸೇರಿಸಬಾರದು?

ಶ್ರೀ ಪಿ.ಜಿ.ಆರ್. ಸಿಂಧ್ಯಾ: ಮಾನ್ಯ ಅಧ್ಯಕ್ಷರೆ, ನಾವು ಯಾರೂ ಸಹಿತ ಪ್ರೋಗ್ರೆಸೀವ್ ಮೆಜರ್ ತೆಗೆದುಕೊಂಡು ಬಾಗಲಕೋಟೆಯಲ್ಲಿರತಕ್ಕಂಥ ಜನರಿಗೆ ಒಂದು ಹೌಸಿಂಗ್ ಸೊಸೈಟಿ ಮಾಡಿ, ಅಲ್ಲಿರತಕ್ಕಂಥ ಜನರಿಗೆ ಲ್ಯಾಂಡ್ ಕೊಡಬೇಕು ಎನ್ನತಕ್ಕಂಥದ್ದರಲ್ಲಿ ನಮ್ಮದೇನು ವಿರೋಧ ಇಲ್ಲ. ಆದರೆ ಈಗ ಬಂದಿರತಕ್ಕಂಥ ಪ್ರಶ್ನೆ ಏನೆಂದರೆ, ವಿರೋಧ ಪಕ್ಷದ ಕಡೆ ಮಾನ್ಯ ಮಲ್ಲಿಕಾರ್ಜುನ ಖರ್ಗೆ ಮತ್ತು ಇತರೇ ಮುಖಂಡರು ಹೌಸಿಂಗ್ ಸೊಸೈಟಿಯಲ್ಲಿ ಆಗಿರತಕ್ಕಂಥ ಅವ್ಯವಹಾರಗಳ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಇದರಲ್ಲಿ ಏನಾಗಿದೆ ಎಂದು ಅವರಿಗೆ ಈಗಾಗಲೇ ಗೊತ್ತಿದೆ. ವಿಶೇಷವಾಗಿ ಬೆಂಗಳೂರು ನಗರದಲ್ಲಿ ಏನಾಗಿದೆ ಎಂಬುದನ್ನು ಮತ್ತು ಎಷ್ಟೆಷ್ಟು ಲ್ಯಾಂಡ್ ಅಲಾಟ್ ಆಗಿದೆ ಎನ್ನತಕ್ಕಂಥದ್ದು ಅವರಿಗೆ ಗೊತ್ತಿದೆ. ನಿಮ್ಮದು ಮೆಜಾರಿಟಿ ಇರುವುದರಿಂದ ಈ ಬಿಲ್ಲನ್ನು ಪಾಸ್ ಮಾಡಲೇಬೇಕೆಂಬ ಹಠಮಾರಿತನ ನಿಮಗಿ ಇದ್ದರೆ ನಮ್ಮದೇನು ತಕರಾರು ಇಲ್ಲ. ಇದನ್ನು ನಾಳೆ ತೆಗೆದುಕೊಳ್ಳುವುದರಿಂದ ಏನು ತೊಂದರೆಯಾಗುವುದಿಲ್ಲ. ಏಕೆಂದರೆ, we are not convinced that it is for Bagalkot town alone. ಹೀಗೆ ಬಹಳ ಕ್ಲಿಯರ್ ಆಗಿ ಹೇಳಿದ್ದಾರೆ. ಹಾಗೆಯೇ "..to any Housing Co-op. Society, registered under the Karnataka Co-operative Societies Act". ಎಂದು ಹೇಳಿದ್ದಾರೆ. ಬಾಗಲಕೋಟೆಯಲ್ಲಿರತಕ್ಕಂಥ

ಊರುಗಳಿಗೆ ಮಾತ್ರ ಇದು ಅನ್ವಯಿಸುತ್ತದೆ ಎಂದು ಅಮೆಂಡ್‌ಮೆಂಟ್‌ನಲ್ಲಿ ಹೇಳಬಹುದಾಗಿತ್ತು. ಆದ್ದರಿಂದ ಈ ರೀತಿಯಾದಂಥ ತಿದ್ದುಪಡಿಯನ್ನು ನಾವು ಒಪ್ಪಿಕೊಳ್ಳುವುದಕ್ಕೆ ತಯಾರಿಲ್ಲ. ಇದನ್ನು ಮತ್ತೆ ನಾಳೆ ತೆಗೆದುಕೊಳ್ಳಿ.

ಶ್ರೀ ಎಸ್. ಸುರೇಶ್ ಕುಮಾರ್: ಮಾನ್ಯ ಚಿಮ್ಮನಕಟ್ಟಿಯವರು ಏನೋ ಹೇಳಿದರು, ಅದರಿಂದ ನಮಗೆ ಏನು ಉಪಯೋಗವಾಗುವುದಿಲ್ಲ, ನಿಮ್ಮ ಬಿಲ್‌ನಲ್ಲಿ ಏನು ಇದೆ ಅದರಿಂದಾಗಿ ನಾವು ಇದಕ್ಕೆ ವಿರೋಧ ಮಾಡಬೇಕಾಯಿತು.

ಶ್ರೀ ಕೆ.ಜೆಬ್. ರಂಗನಾಥ್: ನೀವು ಏನು ಅಮೆಂಡ್‌ಮೆಂಟ್ ಕೊಟ್ಟಿದ್ದೀರೆಂದು ನನಗೆ ಗೊತ್ತಿಲ್ಲ, ಆ ರೀತಿ ಅಮೆಂಡ್‌ಮೆಂಟ್ ಇಲ್ಲ. ಸರ್ಕಾರದ ಕಡೆಯಿಂದ ಅಮೆಂಡ್‌ಮೆಂಟ್ ಇಲ್ಲ. As it is the bill goes. Objects and reasons ---- ತಾವು ಓದಿದ್ದು ನನಗೆ ಸಹಾಯಕವಾಗುತ್ತದೆಯೇ ಹೊರತು ತಮಗೆ ಏನು ಅದರಿಂದ ಸಹಾಯಕವಾಗುವುದಿಲ್ಲ.

ಶ್ರೀ ಎಸ್. ಸುರೇಶ್ ಕುಮಾರ್: ಇದು ನಿಮ್ಮ 40 ವರ್ಷದ ಅನುಭವದ ಮಾತು, ನಮ್ಮನ್ನು ದಾರಿ ತಪ್ಪಿಸುವುದಕ್ಕೆ.

ಶ್ರೀ ಕೆ.ಜೆಬ್. ರಂಗನಾಥ್: ಅವರು ಏನು ಹೇಳುತ್ತಿದ್ದಾರೆ, ನನಗೆ ಗೊತ್ತಿಲ್ಲ ಸ್ವಾಮಿ, ನಾನು ಮೊದಲೇ ಬಂದು ಬಿಟ್ಟೆ, ಅದರಿಂದ 40 ವರ್ಷ ಆಗುತ್ತಾ ಬಂತು. 1962ರಲ್ಲಿ ನಾನು ಬರದಿದ್ದರೆ 40 ವರ್ಷ ಆಗುತ್ತಿರಲಿಲ್ಲ, ಅದಕ್ಕೆ ಏನು ಮಾಡುವುದು? As it is, nobody has suggested any amendment to this Bill. Therefore the Bill will be put before the House as it is.

ಶ್ರೀ ಬಿ. ಸೋಮಶೇಖರ್: ಸರ್ಕಾರದ ಮೆಜಾರಿಟಿ ಇದೆ ಎಂದು ಮಾಡಿಕೊಳ್ಳುತ್ತೀರಿ.

ಅಧ್ಯಕ್ಷರು: ಮೆಜಾರಿಟಿ ಪ್ರಶ್ನೆ ಅಲ್ಲ, ಬುದ್ಧಿವಂತರಾದ ನೀವು ಮೊದಲೇ ಅಮೆಂಡ್‌ಮೆಂಟ್ ಕಳುಹಿಸಿಕೊಡಬೇಕಾಗಿತ್ತು.

ಶ್ರೀ ಬಿ. ಸೋಮಶೇಖರ್: ಇವತ್ತು ನಮಗೆ ಕೊಟ್ಟು, ಅಮೆಂಡ್‌ಮೆಂಟ್ ಕೊಟ್ಟಿಲ್ಲವೆಂದು ನೀವು ಹೇಳಿದರೆ ಹೇಗೆ? ಮೆಜಾರಿಟಿ ಇದೆ ಎಂದು ಮಾಡಿಕೊಂಡು ಹೋಗುತ್ತೇನೆಂದರೆ...

ಶ್ರೀ ಕೆ.ಜೆಬ್. ರಂಗನಾಥ್: ನಾನು ಆ ದೃಷ್ಟಿಯಿಂದ ಹೇಳಲಿಲ್ಲ. ಸ್ವಲ್ಪ ನಿಧಾನವಾಗಿ ಹೇಳಿ, ಕೋಪ ಮಾಡಿಕೊಂಡರೆ ಹೇಗೆ? I am sorry, he has made a most uncharitable remark. ಅವರು ಓದುತ್ತಾ ಹೇಳುತ್ತಿದ್ದರು, ಏಕೆ ಇದನ್ನು ತೆಗೆದುಕೊಳ್ಳಬಾರದು ಎಂದರೆ, ಪಾಸ್ ಮಾಡಿಕೊಳ್ಳುವುದಕ್ಕೆ ಮುಂಚೆ, it may undergo many changes. ಬಿಲ್ಸ್ ಪ್ರೊವೈಡ್ ಮಾಡುವಾಗ objects and reasons should not be taken into consideration -- ಎನ್ನುವ ಅರ್ಥದಲ್ಲಿ ಅದು ಇದೆ.

ಶ್ರೀ ಎಸ್. ಸುರೇಶ್ ಕುಮಾರ್: ಲೇಜಿಸ್ಲೇಷನ್‌ಗೆ ಅದರ ಮಾತನ್ನು ಅರ್ಥ ಮಾಡಿಕೊಳ್ಳಬೇಕು ಎಂದು. ನಿಮ್ಮ ಪ್ರೆಸ್ಕ್ರಿಪ್ಷನ್ ಇಂಟೆನ್‌ಷನ್ ಯಾರಿಗೆ ಬೇಕು.

ಶ್ರೀ ಕೆ.ಜೆಚ್. ರಂಗನಾಥ್: ಸ್ವಲ್ಪ ತಡೆಯಿರಿ, ನೀವು ಬಹಳ ಅವಸರ, ಮಾನ್ಯ ಬಿ. ಸೋಮಶೇಖರ್‌ರವರು ಕೋಪ ಮಾಡಿಕೊಳ್ಳುತ್ತಾರೆ. ನಾನು ಈಗ ಏನು ಹೇಳಲಿ. ನಾನು ಅನಿವಾರ್ಯವಾಗಿ ಮೊದಲೇ ಬಂದಿದ್ದೇನೆ, ನಿಮ್ಮ ಜೊತೆ ಬಂದಿದ್ದರೆ ಚೆನ್ನಾಗಿತ್ತು.

Sri. B. Somashekar: Presumed intentions cannot be part of the Act. ಅಂತ ಕಾಲ್ ಅಂಡ್ ಶೆಕ್ಷರ್ ನಲ್ಲಿ ಹೇಳಿರುವುದು. ಅದನ್ನು ಅರ್ಥ ಮಾಡಿಕೊಳ್ಳುವುದಕ್ಕೆ ಎಕ್ಸ್‌ಪ್ಲೇನೇಶನ್ ಕೊಟ್ಟಿದ್ದಾರೆ. ಬಿಲ್‌ನ ಉದ್ದೇಶ ಅರ್ಥ ಮಾಡಿಕೊಳ್ಳುವುದಕ್ಕೆ ಕೊಟ್ಟಿದ್ದಾರೆಯೇ ಹೊರತು, that will not form part of the Act.

ಶ್ರೀ ಕೆ.ಜೆಚ್. ರಂಗನಾಥ್: ಮಾನ್ಯ ಅಧ್ಯಕ್ಷರೆ, ಅದು ತಮಗೂ ಗೊತ್ತಿದೆ. It won't form part of the Act, But, -- ಬಿಲ್ ಇಂಟ್ರೊಡ್ಯೂಸ್ ಮಾಡುವಾಗ ಯಾವುದಕ್ಕೆ ಈ ಬಿಲ್ ತಂದಿದ್ದೇವೆ ಎನ್ನುವುದಕ್ಕೆ ಆಬ್ಜೆಕ್ಟ್ಸ್ ಅಂಡ್ ರೀಸನ್ಸ್ ಕೊಟ್ಟೇ ಕೊಡಬೇಕು. ತಮಗೆ ಹಾಗೂ ಈ ಸದನಕ್ಕೂ ಗೊತ್ತಿದೆ. ಇಲ್ಲಿ ಏಕೆ ತಂದಿದ್ದೇನೆ ಎನ್ನುವುದರ ಬಗ್ಗೆ ಕೇಳಿದ್ದಾರೆ. It is considered necessary. Why it is considered necessary because we have allocated bulk allotment to the Bagalkot Town Development Authority. ತಾವು ಹೇಳಿದಂತೆ ಮೊದಲೇ ಬಿಲ್ ಬಂದಿರುತ್ತದೆ.

ಶ್ರೀ ಬಿ. ಸೋಮಶೇಖರ್: ತಾವು ಸೆಕ್ಷನ್ 37ಎ ಎಂದು ತಾವು ಏಕೆ ಇಂಟ್ರೊಡ್ಯೂಸ್ ಮಾಡುತ್ತಿದ್ದೀರಿ.

Sri Mallikarjuna Kharge: Because it is very important for Bagalkot, the Minister concerned will clarify and move an amendment.

ಅಧ್ಯಕ್ಷರು: ಪ್ರಸ್ತಾಪ ಏನೆಂದರೆ, "2001ನೇ ಸಾಲಿನ ಕರ್ನಾಟಕ ಮೇಲ್ಕಾಟು ಮಂಡಳಿಗಳ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು".

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು.

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು

ಖಂಡ (2)ಕ್ಕೆ ತಿದ್ದುಪಡಿ

Sri B.B. Chimanna Katti (Minister for Urban Development): Mr. Speaker, Sir, I may be permitted to move an official amendment, which is as follows:-

"That in clause (2) for the Word "Board" the words "Only Bagalkot Town Development Authority shall be substituted".

ಪ್ರಸ್ತಾವನೆಯನ್ನು ಮಂಡಿಸಲಾಯಿತು

ಅಧ್ಯಕ್ಷರು: ಈಗ ಪ್ರಸ್ತಾವವನ್ನು ಸಭೆಯ ಮತಕ್ಕೆ ಹಾಕುತ್ತೇನೆ, ಪ್ರಸ್ತಾವ ಏನೆಂದರೆ, "That in clause (2) for the Word "Board" the words "Only Bagalkot Town Development Authority shall be substituted".

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಖಂಡ-2 ತಿದ್ದುಪಡಿಯಾದ ರೀತಿಯಲ್ಲಿ

ಅಧ್ಯಕ್ಷರು: "ಖಂಡ-2 ತಿದ್ದುಪಡಿಯಾದ ರೀತಿಯಲ್ಲಿ ಈ ವಿಧೇಯಕದ ಅಂಗವಾಗಿರುತ್ತದೆ."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ 2 ತಿದ್ದುಪಡಿಯಾದ ರೀತಿಯಲ್ಲಿ ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಖಂಡ-1 ಇತ್ಯಾದಿ

ಅಧ್ಯಕ್ಷರು: ಪ್ರಸ್ತಾವ ಏನೆಂದರೆ, 'ಮೊದಲನೆಯ ಖಂಡ ದೀರ್ಘ, ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ'.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು)

ಪ್ರಸ್ತಾವದ ಅಂಗೀಕಾರ

ಶ್ರೀ ಬಿ.ಬಿ. ಚಿಮ್ಮನಕಟ್ಟಿ (ನಗರಾಭಿವೃದ್ಧಿ ಸಚಿವರು): ಮಾನ್ಯ ಅಧ್ಯಕ್ಷರೆ, 2001ನೇ ಸಾಲಿನ ಕರ್ನಾಟಕ ಮೇಲ್ಪಾಟು ಮಂಡಳಿಗಳ (ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿ ಆದ ರೀತಿಯಲ್ಲಿ ಅಂಗೀಕರಿಸಬೇಕೆಂದು ಕೋರುತ್ತೇನೆ.

ಅಧ್ಯಕ್ಷರು: ಪ್ರಸ್ತಾವ ಏನೆಂದರೆ, "2001ನೇ ಸಾಲಿನ ಕರ್ನಾಟಕ ಮೇಲ್ಪಾಟು ಮಂಡಳಿಗಳ (ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು".

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು.

5. ಮಂತ್ರಿಗಳ ಹೇಳಿಕೆ:

ವಿಷಯ: ಇತ್ತೀಚಿನ ಕೆಲವು ದಿನಗಳಲ್ಲಿ ವಾಹನ ಅಪಘಾತಗಳು ಸಂಭವಿಸುತ್ತಿರುವುದು.

ಶ್ರೀ ಸಿ.ಆರ್. ಸಗೀರ್ ಅಹಮದ್ (ಸಾರಿಗೆ ಸಚಿವರು): ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಪ್ರಸ್ತಾಪಿಸಿದಂತೆ ಇತ್ತೀಚಿನ ಕೆಲವು ದಿನಗಳಲ್ಲಿ ವಾಹನ ಅಪಘಾತಗಳು